₹ 5/-

# ನೇಸರು
## ತಿಂಗಳೋಲೆ

PAGES 20

NOVEMBER 2025 | Nesaru Tingalole | Vol. XLIII - 11

**ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ**

**Mysore Association's Centenary Year (1926-2026)**



**ಬಿ. ವಿ. ಕಾರಂತರ ಸಂಸ್ಮರಣೆ – ಮೂರು ದಿನಗಳ ಅದ್ದೂರಿ ನಾಟಕೋತ್ಸವ**

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಭಾರತೀಯ ರಂಗಭೂಮಿಯ ನಿಜವಾದ ದೇಸಿ ಪ್ರತಿಭೆ – ಬಿ. ವಿ. ಕಾರಂತ್



ಬಾಬುಕೋಡಿ ವೆಂಕಟರಮಣ ಕಾರಂತ್ ಅವರು ಬಿ.ವಿ. ಕಾರಂತ್ ಎಂದೇ ಕನ್ನಡ ರಂಗಭೂಮಿಯಲ್ಲಿ ಚಿರಪರಿಚಿತರು. ಕನ್ನಡ ರಂಗಭೂಮಿ, ಕನ್ನಡ ಸಿನಿಮಾ ಮತ್ತು ಹಿಂದಿ ಸಿನಿಮಾಗಳಲ್ಲಿ ತಮ್ಮ ಕೃತಿಗಳಿಗೆ ಹೆಸರುವಾಸಿಯಾದ ಭಾರತೀಯ ಚಲನಚಿತ್ರ ನಿರ್ದೇಶಕ, ನಾಟಕಕಾರ, ನಟ, ಚಿತ್ರಕಥೆಗಾರ, ಸಂಯೋಜಕ ಮತ್ತು ನಾಟಕಕಾರ ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡವರು ಬಿ.ವಿ. ಕಾರಂತ್ ರವರು.

ಬಿ.ವಿ. ಕಾರಂತ್ ಅವರು, 1929ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಬಳಿಯ 'ಮಂಚಿ' ಎಂಬ ಹಳ್ಳಿಯಲ್ಲಿ ಜನಿಸಿದರು. ಅವರ ಮನೆಮಾತು ಕನ್ನಡವಾಗಿತ್ತು. ಹಾಗಾಗಿ ಕಾರಂತರಿಗೆ ರಂಗಭೂಮಿಯ ಮೇಲಿನ ಉತ್ಸಾಹ ಚಿಕ್ಕ ವಯಸ್ಸಿನಲ್ಲೇ ಪ್ರಾರಂಭವಾಯಿತು. ಅವರು ಮೂರನೇ ತರಗತಿಯಲ್ಲಿದ್ದಾಗ ರಂಗಭೂಮಿಯೊಂದಿಗಿನ ಅವರ ಮೊದಲ ಪ್ರಯತ್ನ – ಅವರು ಪಿ.ಕೆ. ನಾರಾಯಣ ನಿರ್ದೇಶಿಸಿದ ನನ್ನ ಗೋಪಾಲ ನಾಟಕದಲ್ಲಿ ನಟಿಸಿದರು.  ಅವರು ಪ್ರಸಿದ್ಧ ಗುಬ್ಬಿ ವೀರಣ್ಣ ನಾಟಕ ಕಂಪನಿಯನ್ನು ಸೇರಿದರು,

ಗುಬ್ಬಿ ವೀರಣ್ಣನವರು ಕಾರಂತರನ್ನು ಬನಾರಸ್‌ಗೆ ಕಲಾ ಸ್ನಾತಕೋತ್ತರ ಪದವಿ ಪಡೆಯಲು ಕಳುಹಿಸಿದರು, ಅಲ್ಲಿ ಅವರು ಗುರು ಓಂಕಾರನಾಥ ಠಾಕೂರ್ ಅವರ ಬಳಿ ಹಿಂದೂಸ್ತಾನಿ ಸಂಗೀತದಲ್ಲಿ ತರಬೇತಿ ಪಡೆದರು. ನಂತರ, ಅವರ ಪತ್ನಿ ಪ್ರೇಮಾ ಕಾರಂತರೊಂದಿಗೆ, ಕಾರಂತರು ಬೆಂಗಳೂರಿನ ಅತ್ಯಂತ ಹಳೆಯ ರಂಗಭೂಮಿ ಗುಂಪುಗಳಲ್ಲಿ ಒಂದಾದ 'ಬೆನಕ'ವನ್ನು ಸ್ಥಾಪಿಸಿದರು. ಇದು ಬೆಂಗಳೂರು ನಗರ ಕಲಾವಿದರು ಎಂಬುದರ ಸಂಕ್ಷಿಪ್ತ ರೂಪವಾಗಿದೆ. ನಂತರ, ಪ್ರೇಮಾ ದೆಹಲಿಯಲ್ಲಿ ಬೋಧನಾ ಕೆಲಸವನ್ನು ವಹಿಸಿಕೊಂಡರು ಮತ್ತು ರಾಷ್ಟ್ರೀಯ ನಾಟಕ ಶಾಲೆಯ ಮೂಲಕ ಕಾರಂತರನ್ನು ಬೆಂಬಲಿಸಿದರು.  ನಂತರ ಅವರು 1962ರಲ್ಲಿ ಇಬ್ರಾಹಿಂ ಅಲ್ಕಾಜಿ ನೇತೃತ್ವದಲ್ಲಿ ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ (NSD) ಪದವಿ ಪಡೆದರು. 1969 ಮತ್ತು 1972ರ ನಡುವೆ, ಅವರು ನವದೆಹಲಿಯ ಸರ್ದಾರ್ ಪಟೇಲ್ ವಿದ್ಯಾಲಯದಲ್ಲಿ ನಾಟಕ ಬೋಧಕರಾಗಿ ಕೆಲಸ ಮಾಡಿದರು, ನಂತರ ದಂಪತಿಗಳು ಬೆಂಗಳೂರಿಗೆ ಮರಳಿದರು. ಇಲ್ಲಿ ಕಾರಂತ್ ಕೆಲವು ಸಿನಿಮಾ ಮತ್ತು ಸಂಗೀತದಲ್ಲಿ ತೊಡಗಿಸಿಕೊಂಡರು ಮತ್ತು ಈ ಉದ್ಯಮಗಳಲ್ಲಿ ಗಿರೀಶ್ ಕಾರ್ನಾಡ್ ಮತ್ತು ಯು.ಆರ್. ಅನಂತಮೂರ್ತಿಯವರೊಂದಿಗೆ ತೊಡಗಿಸಿಕೊಂಡರು.  ನಂತರ ಅವರು ಎನ್‌ಎಸ್‌ಡಿಗೆ ಮರಳಿದರು, ಈ ಬಾರಿ 1977 ರಲ್ಲಿ ಅದರ ನಿರ್ದೇಶಕರಾಗಿ. ಎನ್‌ಎಸ್‌ಡಿಯ ನಿರ್ದೇಶಕರಾಗಿ, ಕಾರಂತ್ ಭಾರತದ ದೂರದ ಮೂಲೆ ಮೂಲೆಗಳಿಗೆ ರಂಗಭೂಮಿಯನ್ನು ಕೊಂಡೊಯ್ದರು. ತಮಿಳುನಾಡಿನ ಮಧುರೈನಂತಹ ದೂರದ ಸ್ಥಳಗಳಲ್ಲಿ ಅವರು ಹಲವಾರು ಕಾರ್ಯಾಗಾರಗಳನ್ನು ನಡೆಸಿದರು. ಎನ್‌ಎಸ್‌ಡಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ನಂತರ, ಮಧ್ಯಪ್ರದೇಶ ಸರ್ಕಾರವು ಅವರನ್ನು ಭಾರತ್ ಭವನದ ಆಶ್ರಯದಲ್ಲಿ ರಂಗಮಂಡಲ ರೆಪರ್ಟರಿಯ ಮುಖ್ಯಸ್ಥರನ್ನಾಗಿ ಆಹ್ವಾನಿಸಿತು. 1981 ಮತ್ತು 86ರ ನಡುವೆ ಮಧ್ಯಪ್ರದೇಶದಲ್ಲಿ ರಂಗಭೂಮಿಗೆ ಉತ್ತಮ ಸೇವೆ ಸಲ್ಲಿಸಿದ ನಂತರ, ಕಾರಂತ್ ಕರ್ನಾಟಕಕ್ಕೆ ಮರಳಿದರು. 1989ರಲ್ಲಿ, ಕರ್ನಾಟಕ ಸರ್ಕಾರವು ಅವರನ್ನು ಮೈಸೂರಿನಲ್ಲಿ ಒಂದು ರೆಪರ್ಟರಿಯನ್ನು ಸ್ಥಾಪಿಸಲು ಆಹ್ವಾನಿಸಿತು, ಅದಕ್ಕೆ ಅವರು 'ರಂಗಾಯಣ' ಎಂದು ಹೆಸರಿಸಿ 1995ರ ವರೆಗೆ ನೇತೃತ್ವ ವಹಿಸಿದ್ದರು. ಕಾರಂತ್ ಅವರು ಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಿಗಾಗಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಆರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಮತ್ತು ನಾಗರಿಕ ಗೌರವ ಪದ್ಮಶ್ರೀ ಇವೆಲ್ಲ ಅವರ ಸಾಧನೆಗೆ ಸಿಕ್ಕ ಪ್ರಶಸ್ತಿಗಳು.

ಬಿ. ವಿ. ಕಾರಂತ್ ಅವರು ಸಂಸ್ಕೃತದಿಂದ ಹಿಂದಿಗೆ ಅವರು ಅನುವಾದಿಸಿದ ಕೃತಿಗಳಲ್ಲಿ ಸ್ವಪ್ನ ವಾಸವದತ್ತ, ಉತ್ತರರಾಮ ಚರಿತ ಮತ್ತು ಮೃಚ್ಛಕಟಿಕ ಸೇರಿವೆ. ಅವರು ಕನ್ನಡದಿಂದ ಹಿಂದಿಗೆ ಮತ್ತು ಕನ್ನಡದಿಂದ ಹಿಂದಿಗೆ ಹಲವಾರು ನಾಟಕಗಳನ್ನು ಅನುವಾದಿಸಿದ್ದಾರೆ. ಗಿರೀಶ್ ಕಾರ್ನಾಡರ ತುಘಲಕ್ ನಾಟಕವನ್ನು ಹಿಂದಿ/ಉರ್ದು ಭಾಷೆಗೆ ಅವರು ಅನುವಾದಿಸಿದ್ದು ಆರಾಧನಾ ಸ್ಥಾನಮಾನವನ್ನು ಪಡೆದುಕೊಂಡಿದೆ.

ಕಾರಂತರು 1960ರ ದಶಕದ ಉತ್ತರಾರ್ಧ ಮತ್ತು 70ರ ದಶಕದ ಆರಂಭದಲ್ಲಿ ಕನ್ನಡ ರಂಗಭೂಮಿಯನ್ನು ಪ್ರವೇಶಿಸಿದರು. ಅವರ ಪ್ರವೇಶವು ಕನ್ನಡ ರಂಗಭೂಮಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತಂದಿತು, 1970ರ ದಶಕದ ಆರಂಭದಲ್ಲಿ ನಿರ್ದೇಶಿಸಲಾದ ಜೋಕುಮಾರ ಸ್ವಾಮಿ, ಸಂಕ್ರಾಂತಿ, ಹುಚ್ಚು ಕುದುರೆ ಮತ್ತು ಈಡಿಪಸ್‌ನಂತಹ ಅವರ ನಾಟಕಗಳನ್ನು ಟ್ರೆಂಡ್‌ಸೆಟರ್‌ಗಳೆಂದು ಪ್ರಶಂಸಿಸಲಾಯಿತು. ಈ ನಾಟಕಗಳು ಭಾಷೆ, ಸಂಗೀತ, ಹಾಡು, ಶೈಲೀಕರಣದಂತಹ ರಂಗಭೂಮಿಯ ಎಲ್ಲಾ ಅಂಶಗಳನ್ನು ಸ್ಪರ್ಶಿಸಿದವು

ಸಂಗೀತದ ನವೀನ ಬಳಕೆಯು ರಂಗಭೂಮಿಗೆ ಕಾರಂತರು ನೀಡಿದ ಅತಿದೊಡ್ಡ ಕೊಡುಗೆಗಳಲ್ಲಿ ಒಂದಾಗಿದೆ.  ಶಾಸ್ತ್ರೀಯ, ಸಾಂಪ್ರದಾಯಿಕ ಮತ್ತು ಜಾನಪದ ಪ್ರಕಾರಗಳನ್ನು ಸೆಳೆಯುವ ಮತ್ತು ಅವುಗಳನ್ನು ತಮ್ಮ ಸಂಯೋಜನೆಗಳಲ್ಲಿ ಬೆಸೆಯುವ ಸಾಮರ್ಥ್ಯ ಕಾರಂತರ ಸಾಮರ್ಥ್ಯಗಳಲ್ಲಿ ಒಂದಾಗಿದೆ. ಅವರ ನಾಟಕಗಳು ವಿನ್ಯಾಸಕ್ಕೆ ಕಡಿಮೆ ಪ್ರಸಿದ್ಧವಾಗಿದ್ದವು, ಆದರೆ ಅವುಗಳ ಸಂಗೀತದ ವಿಷಯಕ್ಕೆ ಪ್ರಸಿದ್ಧವಾದವು, ಅದು ರಂಗಭೂಮಿಯ ಗದ್ಯದ ಭಾಗವಾಯಿತು.

*(ಪುಟ 19ಕ್ಕೆ)*

ಸಂಪುಟ 43 ನವೆಂಬರ್ 2025 ಸಂಚಿಕೆ 11

ಗೌ. ಸಂಪಾದಕರು

**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ಕೆ. ಕಮಲ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

❖ ❖ ❖

ಸಂಪರ್ಕ ವಿಳಾಸ:

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವುದಾಜಿರಸ್ತೆ, ಮಾಟುಂಗ

ಮುಂಬಯಿ – 400 019.

✆ 24037065

Email:

mysoreassociation.mumbai@gmail.com

Website:

www.mysoreassociation.in

# ಅಳು ನಗುವಿನ ಸಂಕೋಲೆ – ಈ ಜೀವನ



ಡಾ. ಜ್ಯೋತಿ ಸತೀಶ್

ನಗು ಮತ್ತು ಅಳು ನಮ್ಮ ಜೀವನದ ಸಂತಸ ದುಃಖಗಳನ್ನು ಸೂಚಿಸುವ ಸಹಜ ಪ್ರಕ್ರಿಯೆಗಳಾಗಿವೆ. ಜೀವನವೊಂದು ಅಳು ನಗುವಿನ ಆಟವಿದ್ದ ಹಾಗೆ. ಡಿವಿಜಿಯವರು ಹೇಳಿರುವ ಹಾಗೆ, 'ನಗುವೊಂದು ರಸಪಾಕ, ಅಳುವೊಂದು ರಸಪಾಕ'. ನಾವು ಈ ಭೂಮಿ ಮೇಲೆ ಬರುವಾಗಲೇ ಅಳುತ್ತಲೇ ಬಂದಿದ್ದೇವೆ. ಹೋಗುವಾಗಲೂ ಅಳುತ್ತಾ ಹೋಗುತ್ತೇವೆ. ಅಳು ಮತ್ತು ನಗು ಈ ಎರಡೂ ನಮ್ಮ ಜೀವನದ ನಿಜವಾದ ಸಂಗಾತಿಗಳು. ನಮ್ಮ ಪ್ರತಿ ಕಷ್ಟಸುಖದಲ್ಲೂ ನಮ್ಮ ಜೊತೆಯಲ್ಲೇ ಇರುತ್ತವೆ. ನಗು ನಮ್ಮನ್ನು ಸದಾ ಪ್ರಸನ್ನವಾಗಿರುವಂತೆ ನೋಡಿಕೊಂಡರೆ, ಅಳು ನಮ್ಮೊಳಗೆ ಅಡಗಿರುವ ಸಂವೇದನೆಯ ಭಾರವನ್ನು ಹೊರಹಾಕುವುದರಿಂದ ಮನಸ್ಸು ನಿರಾಳವಾಗಿಸುತ್ತದೆ.

ಒಂದು ಮಗುವು ಧರೆಗೆ ಇಳಿದಾಗ ಅದು ಆರಂಭಿಸುವುದೇ ಅಳುವಿನಿಂದ. ಮಗು ಅತ್ತಿತ್ತು ಎಂಬುದೇ ಆ ತಾಯಿಗೆ ಸಂತಸ. ಅವಳು ನಗುತ್ತಾಳೆ. ಇಲ್ಲಿಂದ ಆರಂಭವಾಗುವ ಜೀವನದ ನಗುವಿನ ಅಳುವಿನ ಸಂಕೋಲೆ. ಜೀವನದುದ್ದಕ್ಕೂ ಒಂದಲ್ಲಾ ಒಂದು ಕಾರಣದಿಂದ ನಗು ಮತ್ತು ಅಳುಗಳು ಈ ಸರಾಪಣಿ ದೊಡ್ಡದಾಗುತ್ತಾ ಹೋಗುತ್ತದೆ. ಜೀವನದ ಆ ಕೊನೆಯ ದಿನವು ಅಳುವಿನ ಸರಪಣಿಯು ಮೊದಲ ಕೊಂಡಿಗೆ ಬಂದು ಸೇರಿಕೊಳ್ಳುತ್ತದೆ. ಸತ್ತವರಿಗಾಗಿ ಅಳುವ ಮುಖೇನ ಅಳು ಎಂಬ ಕೊಂಡಿಗೆ ಬೆಸೆದುಕೊಂಡು ಪೂರ್ಣವಾಗುತ್ತದೆ. ಈ ಅಳುವೇ ಆಗಲಿ, ನಗುವೇ ಆಗಲಿ ಎಲ್ಲವೂ ಅವನದ್ದೇ ಲೀಲೆ ಎಂಬುದನ್ನು ಮಾತ್ರ ಮರೆಯಬಾರದು. ನಗುವಿಗಿಂತ ಅಳುವೇ ನಮ್ಮ ಜೀವನದ ನಿಜವಾದ ಸಂಗಾತಿ ಎಂದೇ ಹೇಳಬಹುದು. ಜೀವನದ ಪ್ರತಿ ಕ್ಷಣದಲ್ಲೂ ಎಲ್ಲಕ್ಕೂ ಮುಂದಾಗಿ ಬರೋದು ಅದು ಅಳುವೇ. ಅದು ಕಷ್ಟದ ಪರಿಸ್ಥಿತಿಯೇ ಇರಬಹುದು, ಸುಖದ ಸಂದರ್ಭವೇ ಇರಬಹುದು, ಮೊದಲು ಕಣ್ಣಲ್ಲಿ ಕಾಣಿಸಿಕೊಳ್ಳುವುದು ಕಣ್ಣೀರು. ಅದು ಅಳುವಿನ ಸಂಕೇತ. ದ್ರೌಪದಿಯ ಸೀರೆಯನ್ನು ದುಶ್ಯಾಸನ ಎಳೆದಾಗ, ದ್ರೌಪದಿ ಕಣ್ಣೀರು ಹಾಕಿ ಶ್ರೀಕೃಷ್ಣನನ್ನ ನೆನೆದಾಗ ಅಕ್ಷಯ ಸೀರೆ ದಯಪಾಲಿಸಿದ ಹರಿ ಎಂದು ಪುರಾಣಗಳು ಹೇಳುತ್ತದೆ. ಕೈಕೇಯಿಯ ಪ್ರಲಾಪದಿಂದ ರಾಮ ಕಾಡು ಸೇರುವಂತಾಯಿತು. ಒಟ್ಟಿನಲ್ಲಿ ನಗುವಿಗಿಂತ ಅಳುವೇ ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತದೆ. ಮಗು ಅತ್ತಾಗ ತಾಯಿ ಹೃದಯ ಮೊದಲು ಕರಗುತ್ತದೆ. ಅಳು ಎದುರಿಗಿರುವವರ ಮನಸ್ಸನ್ನು ಕರಗಿಸುವ ಮೂಲಕ ತನ್ನತ್ತ ಸೆಳೆಯುತ್ತದೆ, ನಗು ಎನ್ನುವುದು ಆತ್ಮದ ಪರಿಮಳವಾದರೆ, ದುಃಖವನ್ನು ತೋರಿಸುವ ಅಳು, ಆತ್ಮವನ್ನು ಮಥಿಸಿ, ಅಂತರ್ಗತವಾದ ಸತ್ವವನ್ನು ಹೊರತೆಗೆಯುವ ಕಡೆಗೋಲು ಇದ್ದಂತೆ. ಎರಡೂ ನಮಗೆ ಮುಖ್ಯವಾದವುಗಳೇ, ಅವೆರಡನ್ನು ಸಮಾನವಾಗಿ ತೆಗೆದುಕೊಂಡು, ಬದುಕಿನ ಉನ್ನತಿಗೆ ಪ್ರಯತ್ನಿಸಬೇಕು.

# ಸಿಂಧು ತಾಯಿ ಸಪ್ಕಾಲ್



✍ ಡಾ. ಸುಮಾ ದ್ವಾರಕಾನಾಥ್

*(ಕಳೆದ ಸಂಚಿಕೆಯಿಂದ.....)*

ಮತ್ತೆ ಮಗಳು ಮಮತಾನ್ನ ಎತ್ತಿಕೊಂಡು  ಮುಂದುವರೆಯಿತು ಪ್ರಯಾಣ . ಸಾಧು ಸಂತರ ಜೊತೆ ಹಾಡುತ್ತಾ ವಿದರ್ಭದ ಹತ್ತಿರವಿರುವ ಚಿಕಲ್ ಧಾರಾ ತಲುಪಿದೆ. ಅಲ್ಲಿಯ ಆದಿವಾಸಿಗಳ ಸಮಸ್ಯೆಯೂ ಇದೇ ಆಗಿತ್ತು. ವ್ಯಾಘ್ರ ಸಂರಕ್ಷಣೆಗಾಗಿ ಆದಿವಾಸಿಗಳನ್ನು ಅರಣ್ಯ ಇಲಾಖೆಯವರು ವಲಸೆ ಎಬ್ಬಿಸುತ್ತಿದ್ದರು. ಕಾಡಿನಲ್ಲಿ ಪಶು ಸಂಗೋಪನೆ ಮಾಡಿಕೊಂಡಿದ್ದವರಿಗೆ ರಕ್ಷಿಸಲು ಯಾರೂ ಇರಲಿಲ್ಲ. ನಾನು ಸತತ 10 ದಿನ ಉಪವಾಸ ಸತ್ಯಾಗ್ರಹ ಮಾಡಿ ದಾಗ ಊರಿಗೆ ಊರೇ ನನ್ನ ಸುತ್ತ ಸೇರಿತ್ತು. ಅಷ್ಟೇ ಅಲ್ಲ ದನಕರುಗಳೂ ನನ್ನಸುತ್ತ ಸೇರಿತ್ತು. ನನಗೆ ನಿಶ್ಯಕ್ತಿಯಿಂದ ಕಿವಿಯಲ್ಲಿ ಧಾರಾಕಾರವಾಗಿ ರಕ್ತ ಹರಿದು ಬರುತ್ತಿತ್ತು.  ಮಂತ್ರಿಗಳವರೆಗೂ ಹೋಗಿ ಬಡಿದಾಡಿ ಅವರಿಗೆ ಪುನರ್ವಸತಿಗೆ ಅನುವು ಮಾಡಿಕೊಟ್ಟೆವೆನ್ನುತ್ತಾಳೆ.  ಅವರನ್ನೆಲ್ಲಾ ಮಂತ್ರಾಲಯಕ್ಕೆ ಕಷ್ಟಪಟ್ಟು ಕರೆದುಕೊಂಡು ಹೋದರೆ, ಅಲ್ಲಿ ಅವರು ಟಾಯ್ಲೆಟ್ ನೋಡಿ , ಶ್ರೀರಾಮನ ಪಾದವೆಂದು ಕೈ ಮುಗಿದು ತೀರ್ಥವೆಂದು ನೀರು ಕುಡಿದು ಮೂತ್ರ ವಿಸರ್ಜನೆ ಮಾಡಲು ಆಗದೆ ವಾಪಸ್ಸು ಬರುತ್ತಾರೆ. ಇಂಥ ಅಮಾಯಕರೂ ನಮ್ಮ ದೇಶದಲ್ಲಿದ್ದಾರೆ ಎಂದು ಹೇಳಿ ನಗುತ್ತಾಳೆ.

ಕಾಡು ಕರಡಿಯಿಂದಾಗಿ ,ಒಬ್ಬ ಆದಿವಾಸಿಯ ಕಣ್ಣುಗಳು ಕುರುಡಾಗಿತ್ತು. ಅವನನ್ನು ಪ್ರಧಾನಮಂತ್ರಿ ಇಂದಿರಾಗಾಂಧಿ ತನಕ ಕರೆದುಕೊಂಡು ಹೋಗಿ, ಕುರಿ ಕೋಳಿ ಅಪಘಾತದಿಂದ ಸತ್ತರೆ ಪರಿಹಾರ ಸಿಗುತ್ತದೆ ಆದರೆ ಮನುಷ್ಯರಿಗೇಕೆ ಇಲ್ಲವೆಂದು ವಾದಿಸಿ ನ್ಯಾಯ ಕೊಡಿಸುತ್ತಾಳೆ.  ಹೀಗೆ 84 ಹಳ್ಳಿಗಳನ್ನು ಸುಧಾರಿಸುತ್ತಾಳೆ. ಅವಳು ದಿಲ್ಲಿಯಲ್ಲಿದ್ದಾಗಲೇ ಅವಳ ಮಗಳು ಮಮತಾ  ನದಿಯ ನೀರಿನಲ್ಲಿ ಜಾರಿ ಬಿದ್ದು ಆದಿವಾಸಿಗಳು ಅವಳನ್ನು ರಕ್ಷಿಸಿರುತ್ತಾರೆ. ಮಗುವಿನ ಮೆದುಳಿಗೆ ನೀರು ಸೇರಿ, ಕಣ್ಣು ಕಾಣದಂತಾಗಿರುತ್ತದೆ.  ಒಂದು ತಿಂಗಳ ತನಕ ಸುಧಾರಿಸಿಕೊಳ್ಳುತ್ತಾಳೆ. ಅವಳ ಮನಸ್ಸಿಗೆ ಅದು ತಟ್ಟುತ್ತದೆ. ಅವಳನ್ನು ಕರೆದುಕೊಂಡು ವಿಂಧ್ಯ ಸಾತ್ಪುರವನ್ನು ಬಿಟ್ಟು ಸಹ್ಯಾದ್ರಿಯ ಕಡೆಗೆ ಬರುತ್ತಾಳೆ. ಮಗಳನ್ನು ಕರೆದುಕೊಂಡು ಪುಣೆಯ ಬೀದಿ ಬೀದಿಯಲ್ಲಿ ಹಾಡುತ್ತಾ ಅಲೆಯುತ್ತಾಳೆ.

ಒಂದು ಸಲ ತರಕಾರಿ ಮಾರುವವಳ ಹತ್ತಿರ ತರಕಾರಿ ಕೊಳ್ಳಲು ಹೋದಾಗ , ನನ್ನ ನೋಡಿ, ನನ್ನ ಸಾವಿತ್ರಿ ಎಂದು ತರಕಾರಿಯನ್ನೂ ಬಿಟ್ಟು ನನ್ನನ್ನು ತಬ್ಬಿಕೊಂಡು ಒಂದು ರಿಕ್ಷಾದಲ್ಲಿ ಹತ್ತಿಸಿ ಅವಳ ಮನೆಗೆ ಕರೆದುಕೊಂಡು ಹೋದಳು. ನನ್ನನ್ನುಮಾತಾಡಲೂ ಬಿಡದೆ ಉಪಚಾರ ಮಾಡಿದಳು . ಅವಳ ಮಗಳನ್ನು ಅವಳ ಅಳಿಯ ಎತ್ತಿಕೊಂಡು ಹೋಗಿ ತುಂಬಾ ತೊದರೆ ಕೊಟ್ಟಿದ್ದನಂತೆ. ಅವನೆಲ್ಲಿ ಬರುತ್ತಾನೋ ಅಂತ ಬಾಗಿಲು ಮುಚ್ಚಿ ನನ್ನನ್ನು ಕಾಪಾಡಿದಳು. ತಡೆಯಲಾಗದೆ ನಾನು ಸತ್ಯ ಹೇಳಿದಾಗ ಅವಳೂ ಪ್ರಾಣ ಬಿಟ್ಟಳು ಅಲ್ಲಿಂದಲೂ ನನ್ನನ್ನು ಹೊರಗಟ್ಟಿದರು ಎನ್ನುತ್ತಾಳೆ.

ಅಲ್ಲಿಂದ ಬಂದರೆ ಒಂದು ಮಂದಿರದಲ್ಲಿ  ಬಾಲಗಂಧರ್ವರ ಕಾರ್ಯಕ್ರಮ ಏರ್ಪಾಟಾಗಿರುತ್ತದೆ. ಆದರೆ ಮಂದಿರದೊಳಗೆ ಹೋಗಲು ಕಾವಲುಗಾರ ಬಿಡುವುದಿಲ್ಲ. ಅವಳ ಮನಸ್ಸು ಮಾತ್ರ ಈ ಅವಕಾಶ ಬಿಡಬೇಡ, ಒಳನುಗ್ಗು ಎಂದು ಹೇಳುತ್ತಿರುತ್ತದೆ. ಗುಂಪಿನಲ್ಲಿ ಗೋವಿಂದ ಎಂದು ಅವರ ಗುಂಪಿನಲ್ಲಿ ಒಳಗೆ ನುಗ್ಗಿಬಿಡುತ್ತಾಳೆ. ಸೀದಾ ವೇದಿಕೆಗೆ ನುಗ್ಗಿ ವೇದಿಕೆಯ ಹಿಂದಿದ್ದ ವ್ಯಾಘ್ರದ ಚಿತ್ರವನ್ನು  ತೋರಿಸಿ ರಾಗವಾಗಿ ಹಾಡುತ್ತಾಳೆ.

ಮಂಜಿಲ್ ಬಹುತ್ ದೂರ್ ಹೈ,ಜಾನಾ ವಹಾ ಜರೂರ್ ಹೈ॥

ರಾಸ್ತಾ ಮುಶಕಿಲ್ ಹೈ, ಮರ್ ನಾ ಮಂಜೂರ್ ಹೈ॥

ಅಲ್ಲಿ ನನಗೆ ಭರ್ಜರಿ ಭೋಜನ ಸಿಕ್ಕಿತು ಅಂತಾಳೆ. ಹೀಗೇ ಬೀದಿ ಅಲೆಯುತ್ತಿದ್ದಾಗ ಒಂದು ಬೋರ್ಡ್ ಕಾಣಿಸುತ್ತದೆ. ಶ್ರೀಮಂತ ಹಲ್ವಾಯಿ ದಗಡೂ ಶೇಟ್  ಟ್ರಸ್ಟ್ ನವರು ಆಶ್ರಮ ನಡೆಸುತ್ತಿರುತ್ತಾರೆ. ಅಲ್ಲಿ ಮಗಳನ್ನು ಸೇರಿಸಲು ನಿರ್ಧರಿಸುತ್ತಾಳೆ. ಆಶ್ರಮದವರ ಪ್ರಶ್ನೆಗೆ ನಾನು ಅನಾಥ ಮಕ್ಕಳಿಗೆ ತಾಯಿಯಾಗ ಬಯಸುತ್ತೇನೆ, ಸ್ವಂತ ಮಗಳು ಜೊತೆಯಲ್ಲಿದ್ದರೆ, ನಾನು ಆ ಮಕ್ಕಳಿಗೆ ನ್ಯಾಯ ಒದಗಿಸಲಾರೆನು ಎಂದು ಹೇಳುತ್ತಾಳೆ. ಮಗಳನ್ನು ರಕ್ಷಿತ ಸ್ಥಾನದಲ್ಲಿಟ್ಟು ನಿರಾಳವಾಗಿ, ನಿರಾತಂಕದಿಂದ ಅನಾಥ ಮಕ್ಕಳ ಕಡೆ ನಡೆಯುತ್ತಾಳೆ. ರೈಲ್ವೆ ಸ್ಟೇಷನ್, ಬಸ್ ಸ್ಟಾಂಡ್ ನಲ್ಲಿ ಅನಾಥ ಮಕ್ಕಳನ್ನು ಹುಡುಕಿ ತಂದು, ಬಿಕ್ಷೆಬೇಡಿ ಸಾಕಿ, ವಿದ್ಯೆ ಕಲಿಸಿ ಸುಸಂಸ್ಕೃತರನ್ನಾಗಿ ಮಾಡುತ್ತಾಳೆ. ಹೀಗೇ ಸುಮಾರು 1500 ಮಕ್ಕಳಿಗೆ ತಾಯಿಯಾಗುತ್ತಾಳೆ. ಇಂದು ಆ ಮಕ್ಕಳು ಇಂಜಿನಿಯರ್, ಡಾಕ್ಟರ್, ಲಾಯರ್ ಗಳಾಗಿ ದೇಶ ಸೇವೆ ಮಾಡುತ್ತಿದ್ದಾರೆ. ಅವಳ ಮಗಳು ಬಿ.ಎ. ಎಮ್.ಬಿ.ಎ. ಮಾಡಿದ್ದಾಳೆ. ಅವಳ ಮೇಲೆ ಇನ್ನೊಬ್ಬ ವಿಧ್ಯಾರ್ಥಿನಿ ಪಿ.ಎಚ್‌ಡಿ. ಮಾಡ್ತಿದ್ದಾಳೆ.ಕರ್ನಾಟಕದ ಹತ್ತನೆಯ ತರಗತಿಯ ಮಕ್ಕಳಿಗೆ ಇವಳ ಜೀವನ ಚರಿತ್ರೆಯನ್ನು ಪಠ್ಯಪುಸ್ತಕದಲ್ಲಿ ಪರಿಚಯಿಸಿದ್ದಾರೆ. ಸಂತ ಗಾಡ್ಗೆ ಧರ್ಮಶಾಲೆಯಲ್ಲಿಒಬ್ಬ ಪತ್ರಕರ್ತೆ ನೀಲಿಮಾ ಗಾಡ್ಗೆ ಪುಣೆಯ ದೈನಿಕ ಪತ್ರಿಕೆಗಾಗಿ ನನ್ನ ಸಂದರ್ಶನ ಮಾಡಿದಾಗ ನಾನು ಸಮಾಜದ ದೃಷ್ಟಿಗೆ ಬಿದ್ದೆ. ಮೊದಲ ಕಾರ್ಯಕ್ರಮದಲ್ಲೇ ಹಣದ ಮಳೆ ಸುರಿಯಿತು. ಅನ್ನವಸ್ತ್ರಗಳೆಲ್ಲಾ ಸಮೃದ್ಧವಾಗಿ ದೊರಕಿತು. ಎಲ್ಲಾ ಆದಿವಾಸಿಗಳಿಗೆ ಅರ್ಪಿಸಿದೆ. ನನಗೆ 382 ಅಳಿಯಂದಿರು, 49 ಸೊಸೆಯರಿದ್ದಾರೆ. ಮೊಮ್ಮಕ್ಕಳು ಇದ್ದಾರೆ ಎಂದು ನಗುತ್ತಾ ಹೇಳುತ್ತಾಳೆ. ಸುಮಾರು 9 ಕಡೆಗಳಲ್ಲಿ ಬಾಲವಿಕಾಸ ಕೇಂದ್ರಗಳನ್ನು ತೆರೆದು ಅನಾಥ ಮಕ್ಕಳ ಸಂರಕ್ಷಣೆ ನಡೆಸುತ್ತಿದ್ದಾಳೆ. 700ಕ್ಕೂ ಮಿಕ್ಕಿ ಪುರಸ್ಕಾರಗಳನ್ನು ಪಡೆದಿದ್ದಾಳೆ. ಇವುಗಳಲ್ಲಿ ಮುಖ್ಯವಾಗಿ 2021ರಲ್ಲಿ

ಪದ್ಮಶ್ರೀ ಪ್ರಶಸ್ತಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ನಾರಿ ಶಕ್ತಿ ಪುರಸ್ಕಾರ, ಗೌರವಾನ್ವಿತ ಡಾಕ್ಟರೇಟ್ ಪದವಿಯನ್ನು, ಪ್ರಣಬ್

ಮುಖರ್ಜಿ, ಪ್ರತಿಭಾಪಾಟೀಲ್ ಮುಂತಾದವರಿಂದ ಪಡೆದಿದ್ದಾಳೆ. ಅಹಮದೀಯ ಮುಸ್ಲಿಮ್ ಶಾಂತಿ ಪುರಸ್ಕಾರ ಪಡೆದಿದ್ದಾಳೆ. 2010ರಲ್ಲಿ ಇವಳ ಮೇಲೆ ಮೀ ಸಿಂಧುತಾಯಿಸಪ್ಕಾಲ್ ಎನ್ನುವ ಸಿನಿಮಾನೂ ಬಂದಿದೆ. ಈ ಸಿನಿಮಾ 54ನೆಯ ಲಂಡನ್ ಫಿಲ್ಮ್ ಫೆಸ್ಟಿವಲ್ ವರ್ಲ್ಡ್ ಪ್ರೀಮಿಯರ್‌ಗೆ ಆಯ್ಕೆಯಾಗಿತ್ತು.

2023ರಲ್ಲಿ ಸಿಂಧುತಾಯಿ ಮಾಜಿ ಆಯಿ ಎನ್ನುವ ಹೆಸರಿನ ಮರಾಠಿ ಸೀರಿಯಲ್ ಕೂಡ ಬಂತು.

ಪುಣೆಯ ಆಕಾಶವಾಣಿ ಸಂದರ್ಶನದಲ್ಲಿ ಹಾಡು ಹೇಗೆ ಕಲಿತೆ ಎನ್ನುವ ಪ್ರಶ್ನೆ ಕೇಳಿದಾಗ "ಸಂಘರ್ಷದ ಕೈ ಹಿಡಿದೆ, ಸಂಗೀತದ ಆಧಾರ ಮಾಡಿಕೊಂಡೆ. ಹೊಟ್ಟೆ ಹಸಿದಾಗ ಇಂಪಾಗಿ ಹಾಡಲು ಕಲಿತೆ" ಎನ್ನುತ್ತಾಳೆ.

ಅವಳಿಗೆ ಅಮೆರಿಕಾದಿಂದ ಭಾಷಣ ಮಾಡಲು ಕರೆ ಬರುತ್ತದೆ. ಇವಳ ಉಡುಪು ಸಾದಾ 9 ಗಜದ ಸೀರೆ ಕಚ್ಚೆ ಹಾಕಿ ಉಡುವುದು. ಇವಳ ಉಡುಪು ನೋಡಿ ಮಹಾರಾಷ್ಟ್ರ ಜೈ, ನವ್ವಾರಿ ಬೆಸ್ಟೆಂದು ಸ್ವಾಗತ ಮಾಡುತ್ತಾರೆ. ಅಲ್ಲಿಯ ಜನ 1500 ಡಾಲರ್ ಇವಳ ಉಡಿಗೆ ತುಂಬಿ ಕಳಿಸುತ್ತಾರೆ. ಹೀಗೇ 25 ದೇಶಗಳನ್ನು ಸುತ್ತಿ ಬಂದಿದ್ದೇನೆ ಎನ್ನುತ್ತಾಳೆ.

ಪತ್ತರ್ ಬಹುತ್ ಮಿಲತಾ ಹೈ । ಪರ್ ದಿಲ್ ನಹಿ ಮಿಲತಾ।

ಕಫನ್ ಕೊ ಜೇಬ್ ನಹಿ। ಮೌತ್ ರಿಶ್ವತ್ ನಹಿ ಲೇತಾ। ಕಾಗೆ ಗುಬ್ಬಿ ತರಹ ಹಾರಬೇಡಿ, ಗರುಡನ ತರಹ ಎತ್ತರಕ್ಕೆ ಹಾರಿ ಎಂದು ಕಿವಿ ಮಾತು ಹೇಳುತ್ತಾಳೆ. ಮುಳ್ಳಿಗೆ ಚುಚ್ಚುವುದು ಗೊತ್ತೇ ಹೊರತು ನೋವಿನ ಅನುಭವವಿಲ್ಲ. ಈಗೀಗ ರೈತರು ಆತ್ಮಹತ್ಯೆ ಮಾಡಿಕೊಳ್ತಾರೆ, ಆದರೆ ಯಾವುದಾದರೂ ರೈತ ಹೆಂಗಸು ಆತ್ಮಹತ್ಯೆ ಮಾಡಿಕೊಂಡಿದ್ದ ನೋಡಿದ್ದೀರಾ, ಅವಳು ತಾಯಿಯಾಗಿ ಮಕ್ಕಳನ್ನು ಬೆಳಸುತ್ತಾಳೆ ಎಂದು ಹೇಳುತ್ತಾಳೆ.

ಇನ್ನೊಂದು ಮರೆಯಲಾರದ ಘಟನೆಯೆಂದರೆ ಮನೆಯಿಂದ ಹೊರಗೆ ಹಾಕಿದ ಅತ್ತೆ ಮನೆಯವರೇ ಊರ ಜನರೊಂದಿಗೆ ಸೇರಿ ಇವಳನ್ನು ಸನ್ಮಾನಿಸುತ್ತಾರೆ. ವೇದಿಕೆಯ ಮೇಲೆ ಗಂಡ ಅಳುತ್ತಾ ಕೂತಿರುತ್ತಾನೆ. ಇವಳಿಗೆ ನಗು ಬರುತ್ತದೆ. ತಕ್ಷಣ ಸಂಭಾಳಿಸಿಕೊಂಡು ಹತ್ತಿರ ಹೋಗಿ ಕೈಹಿಡಿದು ಹೇಳುತ್ತಾಳೆ. "ಅಳಬೇಡ, ನನ್ನ ಜೊತೆ ಬಾ, ಗಂಡನಾಗಿ ಅಲ್ಲ, ನಾನು ಹೆಂಡತಿಯಾಗಿರಲಾರೆ, ಅಮ್ಮನಾಗಿ ನಿನ್ನನ್ನು ಸಾಕುತ್ತೇನೆ. ಅಂತ ಹೇಳಿ ಆಶ್ರಮಕ್ಕೆ ಕರೆತಂದು ಮಕ್ಕಳಿಗೆ ಹೇಳುತ್ತಾಳೆ" ನನ್ನ ಅತ್ಯಂತ ದುಷ್ಟ ಮಗ ಇವನನ್ನು ಹುಷಾರಾಗಿ ನೋಡಿಕೊಳ್ಳಿ" ಎಂದು ಹಾಸ್ಯಮಾಡುತ್ತಾಳೆ..

ಜೀವನದಲ್ಲಿ ಅತ್ಯಂತ ಮಹತ್ವದ ಹೆಜ್ಜೆಯೆಂದರೆ ಕ್ಷಮಿಸುವುದು. ಇದು ತಾಯಿಯಿಂದ ಮಾತ್ರ ಸಾಧ್ಯ . ನಾನು ಹೆತ್ತಮ್ಮನನ್ನು, ಗಂಡನನ್ನು ಎಲ್ಲರನ್ನೂ ಮನಸಾ ಕ್ಷಮಿಸಿಬಿಟ್ಟೆ. ಮನಸ್ಸು ಹಗುರವಾಯ್ತು. ಇಂಥ ಮಾಯಿ ತನ್ನ 73ನೆಯ ವಯಸ್ಸಿನಲ್ಲಿ ಹೃದಯಸ್ಥಂಭನದಿಂದ 4 ಜನವರಿ 2022 ದೇವರ ಪಾದ ಸೇರಿದಳು. ಈ ಕಲಿಯುಗದಲ್ಲೂ ಬೂದಿಯಿಂದೆದ್ದ ಇಂಥಾ ದೇವತಾಸ್ತ್ರೀಯಲ್ಲಿ ನಾರಿ ಶಕ್ತಿಯನ್ನುಕಾಣಲಾರೆವೇ?

ಈ ಅವಕಾಶ ನೀಡಿದ ಗೆಳತಿ ರೂಪಶ್ರೀಗೂ ಮತ್ತು ಅಖಿಲಭಾರತೀಯ ಸಾಹಿತ್ಯ ಪರಿಷತ್, ಜಿಲ್ಲಾ ಸಮಿತಿ ಮೈಸೂರು ಸೋದರಿಯೆಲ್ಲರಿಗೂ ,ಮತ್ತು ಈ ಸಂಗ್ರಹಕ್ಕೆ ಸಹಕರಿಸಿದ ಪುಂಡಲೀಕ ಪೈಮತ್ತು ಮರಾಠಿ ಪುಸ್ತಕ ಓದಿದ ಜಯಶ್ರೀ ಪಾಟೀಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಿಂಧುತಾಯಿಯನ್ನು ಕರ್ನಾಟಕ್ಕೆ ಪರಿಚಯಿಸಲು ನನ್ನನ್ನು ರೂಪಶ್ರೀ ಮೂಲಕ ಸೀಂಧುತಾಯಿಯೇ ಪ್ರೇರೇಪಿಸಿದ್ದಾಳೆ ಎಂದು ನನ್ನ ನಂಬಿಕೆ. ಈ ಹಚ್ಚಿಟ್ಟ ಹಣತೆಯ ಬೆಳಕು ಸದಾ ಬೆಳಗುತ್ತಿರಲಿ. ನಿಮಗೆಲ್ಲರಿಗೂ ಸ್ಪೂರ್ತಿ ನೀಡಲಿ. ಜೈಹಿಂದ್ ಜೈ ಕರ್ನಾಟಕ. ಸಿರಿಗನ್ನಡಂ ಗೆಲ್ಗೆ.




ನೀಲಿ ಅಲೆಗಳ..ಅಬ್ಬರ. .ಕ್ಯಾಚ್ ಅಸ್ ಇಫ್ ಯು ಕ್ಯಾನ್ ..
"ವುಮನ್ ಇನ್ ಬ್ಲೂ" ಸಾಗರ ದಲೆ ಗಳ ಅಬ್ಬರ,
ಹರ್ಮನ್ ಪ್ರೀತ್ ಕ್ರಿಕೆಟ್ ಟೀಂ, ಮಹಿಳೆಯರ,
ಛಲದಲೆ ..ಬಲದಲೆ. ಧ್ಯೇಯದಲೆಯ ಸಾಗರ,
ಸಾಧನೆಯ..ಗುರಿಯ..ಸಾಧಿಸಿ,
"ಕಾಂಗರೂ" ಗಳ ಮಣಿಸಿ,
ಚಾರಿತ್ರಿಕ ಇತಿಹಾಸವ ಸೃಷ್ಟಿಸಿ,
ದಕ್ಷಿಣ ಆಫ್ರಿಕಾದ ಟೀಂನ " ಸ್ಪಿಂಗ್ ಬಾಕ್" ಜಿಂಕೆಗಳ ದಂಗಾಗಿಸಿ,
ತ್ರಿವರ್ಣ ಕೀರ್ತಿ ಪತಾಕೆ..ಹಾರಿಸಿ, ಭಾರತಾಂಬೆಯ
ಕಿರೀಟಕ್ಕೆ ಮತ್ತೊಂದು ಹೊನ್ನ ಗರಿಯ ತೊಡಿಸಿದ
..ಬ್ಯೂಟಿ ವಿತ್ ಬ್ರೇನ್.. ಸಿಂಹಿಣಿಯರ,
ವಿಶ್ವ ಚಾಂಪಿಯನ್ನರ, ಕ್ರಿಕೆಟ್ ಹೀರೋಯಿನ್‌ಗಳ..
"ಒನ್ ಲೈನ್.."
"ವಿಲ್ ಟು ವಿನ್.." ಕ್ಯಾಚ್ ಅಸ್ ಇಫ್ ಯು ಕ್ಯಾನ್"??

– ಸುಮನಾ

# ಪ್ರಾಣಿ ಪ್ರಪಂಚ

✍ ವನಜಾ ರಾಜನ್

ಎಲ್ಲಿದೆ ಅಂತ ಆಶ್ಚರ್ಯವೇನು? ಸೃಷ್ಟಿಕರ್ತನು ಒಂದು ಕಾಲದಲ್ಲಿ ಈ ಧರೆಯಲ್ಲಿ ಮನುಷ್ಯನಿಗೆ ಪ್ರಾಣಿ ಪಕ್ಷಿಗಳಿಗೆ, ಎಲ್ಲಾ ಜೀವ ಜಂತುಗಳಿಗೆ ಪ್ರತ್ಯೇಕ ಸ್ಥಾನ ಮಾನ ಕಲ್ಪಿಸಿಕೊಟ್ಟಿರಲೇಬೇಕು. ಯಾಕೆಂದರೆ ಕಾಡಿನ ರಾಜ, ಸಿಂಹ ಎಂದು ನಾವು (ಈ ಹಿಂದೆ) ಓದಿ ತಿಳಿದಿದ್ದೇವೆ. ದರ್ಪ, ಧೈರ್ಯ, ಪರಾಕ್ರಮಕ್ಕೆ ಹೆಸರುವಾಸಿಯಾದವನು ಸಿಂಹರಾಜ ಕಾಡಿನಲ್ಲಿ ರಾಜಪ್ರಭುತ್ವ (monarchy) ಇರಬಹುದೆಂದು ಊಹಿಸಬಹುದು. ರಾಜನ ಕೈಕೆಳಗೆ ಕಾರ್ಯನಿರ್ವಹಣೆ ಮಾಡಲು ಮಂತ್ರಿವರ್ಗವೂ ಇರಲೇ ಬೇಕು. ಸೂಕ್ತ ಸಲಹೆ ತಂತ್ರ (ಕುತಂತ್ರ) ಗಳನ್ನು ಬೋಧಿಸಲು 'ನರಿ' ಇರುತ್ತಿತ್ತು!



ಇಂದು ಮನುಷ್ಯ ತಾನೇ ಬಹಳ ಬುದ್ಧಿವಂತ. ಈ ಧರೆಗೆ ತಾನೇ ಸರ್ವಾಧಿಕಾರಿ ಎಂದು ಭಾವಿಸಿಕೊಂಡು ನೆಲ–ಜಲ–ಕಾಡು ಎಲ್ಲವನ್ನೂ ಆಕ್ರಮಿಸಿಕೊಂಡು ಎಷ್ಟೋ ಪ್ರಾಣಿಗಳನ್ನು ಭೂಮಿಯಿಂದಲೇ ಉಚ್ಚಾಟನೆ ಮಾಡಿಬಿಟ್ಟಿದ್ದಾನೆ. ಹಲವಾರು ಕಾಡುಪ್ರಾಣಿಗಳನ್ನು ಬೋನಿನಲ್ಲಿಟ್ಟಿದ್ದಾನೆ ಪ್ರಾಣಿ ಸಂಗ್ರಹಾಲಯಗಳಲ್ಲಿ! ಅಲ್ಲಿ ಅವರಿಗೆ 'ಹಾಕಿದ ಹಿಟ್ಟು, ತೋರಿದ ನೀರು' ಮೇಲಿನದು ಕಾನನದ ಕಥೆ ಯಾದರೆ ನಾಡಿನಲ್ಲಿ ಜೀವಿಸಿರುವ ಪ್ರಾಣಿಗಳ ಪಾಡು ಇನ್ನೂ ಮೋಸ! ನಾಯಿ, ಬೆಕ್ಕು, ಹಸು, ಕರು, ಕತ್ತೆ, ಕುದುರೆ ಇವುಗಳಲ್ಲಿ ಸುವ್ಯವಸ್ಥಿತ ಸಂಘಟನೆ ಎಲ್ಲಿದೆ? ಸುಖ ಸೌಲಭ್ಯಗಳು 'ಶ್ವಾನ' ಪ್ರಪಂಚದ ಕೆಲವಾರು ನಾಯಿಗಳಿಗೆ ಮಾತ್ರ ಲಭ್ಯ! "ಅವುಗಳು ಯಾರ ಛತ್ರ ಛಾಯೆಯಲ್ಲಿ ಬಾಳುತ್ತಿವೆ" ಎಂಬುದು ಮುಖ್ಯ ವಿಷಯ. ಬೀದಿಯಲ್ಲಿ ತಿರುಗಾಡುವ ನಾಯಿಗಳ ಪಾಡು ನಿಜಕ್ಕೂ ನಾಯಿಪಾಡು. ಮರಿಗಳೊಡನೆ ಸಂಸಾರ ಸಮೇತ ರಸ್ತೆ ರಸ್ತೆಯಲ್ಲೂ ತಿರುಗಾಡುತ್ತಾ, ಛೀ.. ಥೂ... ಎಂದೆನ್ನಿಸಿಕೊಂಡು ಇರುಳೆಲ್ಲಾ ಬಂದು ಗುಂಪಿನ ನಾಯಿಗಳು ಮತ್ತೊಂದರೊಡನೆ (ಸವಾಲು–ಜವಾಬು) ಬೊಗಳಿ ಬೊಗಳಿ ಸುಸ್ತಾಗಿ ರಸ್ತೆ ಬದಿಯಲ್ಲೋ, ರಸ್ತೆ ಮಧ್ಯದಲ್ಲೋ ನಿದ್ರೆ ಮಾಡುವುದು ಸಾಮಾನ್ಯ ದೃಶ್ಯ! ಬೀದಿ ಬೆಕ್ಕುಗಳ ಜೀವನ ಸಹ 'ಕದ್ದು' ತಿನ್ನುವುದರಲ್ಲಿಯೇ ಕಳೆದು ಹೋಗುತ್ತದೆ. ಅವುಗಳಿಗೆ ವಾಕ್ ಶಕ್ತಿ ಇಲ್ಲದ ಮೂಕ ಪ್ರಾಣಿಗಳೆಂದು ಅವರನ್ನು ಮನುಷ್ಯನ ದುರ್ಗುಣಗಳೊಡನೆ ಹೋಲಿಸಿ ಹೇಳುವಂತಹ ಬೈಗುಳ ಸರಮಾಲೆಯೇ ಸಿದ್ಧವಾಗಿದೆ.

ಇದು ನ್ಯಾಯವೇ? ನಾಯಿ ಎಂದರೆ ಕೃತಜ್ಞತೆ ಸ್ವಾಮಿನಿಷ್ಠೆಯೆಂದು ಅರಿತಿದ್ದರೂ ಮನುಷ್ಯನು ಎಲ್ಲಾ ದುಷ್ಕರ್ಮಗಳನ್ನು 'ನಾಯಿಬುದ್ಧಿ' ಎಂದು ಹಳಿಯುತ್ತೇವೆ. (ನಾಯಿ ಬಾಲ ಡೊಂಕು, ನಾಯಿ ಬೊಗಳಿದರೆ ದೇವಲೋಕ ಹಾಳೇ?" ಇತ್ಯಾದಿ)

ಕತ್ತೆ ಕಥೆ ಅಂತೂ ಬರೀ ವ್ಯಥೆ! ಕತ್ತು ಬಗ್ಗಿಸಿಕೊಂಡು ಬೆನ್ನಿನ ಮೇಲೆ ಭಾರ ಹೊತ್ತು ದಿನವಿಡೀ ದುಡುಯುತ್ತಿದ್ದರೂ ಯಾರಿಗೂ ಕಾಣಿಸುವುದಿಲ್ಲ. ಮನುಷ್ಯ ಹಾಗೂ ಕತ್ತೆಗಳ ಸಂಬಂಧ 700ಕ್ಕೂ ಹಿಂದಿನದು ಎಂದರೆ ನಂಬುವಿರಾ? ಅವುಗಳ ಸಂಖ್ಯೆ ಬಹಳ ಮಟ್ಟಿಗೆ ದಿನೇ ದಿನೇ ಇಳಿಮುಖವಾಗುತ್ತಿದೆಯೆಂದು ಇತ್ತೀಚಿಗೆ ದಿನಪತ್ರಿಕೆಗಳಲ್ಲಿ ಓದಿ ಮನ ನೊಂದಿತು. ಆಗೊಮ್ಮೆ ಈಗೊಮ್ಮೆ ತಲೆ ಎತ್ತಿ ಧ್ವನಿ ತೆಗೆದು ನೋವು ವ್ಯಕ್ತಪಡಿಸಿದಾಗ ಎಷ್ಟೊಂದು ಛೀಮಾರಿ ಅದಕ್ಕೆ ಪಾಪ! 'ಕತ್ತೆ ಧ್ವನಿ ಕರ್ಕಶ' ಕತ್ತೆ ಕಿರುಚುತ್ತದೆ ಅಂತ ವಿವಿಧ ರೀತಿಯ ವಿವರಣೆ 'ಕತ್ತೆ ಬಲ್ಲದೆ ಕಸ್ತೂರಿಯ ಪರಿಮಳ' ಯಾರಿಗೆ ಗೊತ್ತು? ಯಾರಾದರೂ ಅದನ್ನು ಕೇಳಿದ್ದಾರೆಯೇ? 'ಕತ್ತೆ ತರಹ ಕಿರುಚಬೇಡ' ಅನ್ನೋ ಬೈಗಳ ಮಾತು ಕೇಳಿರಬಹುದು, ಛೇ!

ನನ್ನ ಹಾಗೆ ಮತ್ತಿತರ ಕಣ್ಣೊರೆಸುವ ಒಂದು ಜಾಹೀರಾತನ್ನು ನೋಡಿದೆನು (ಪತ್ರಿಕೆಯಲ್ಲಿ)

ಮುತ್ತಿನಂತಹ ಮಾತುಗಳು ಅಂದದ ಚಂದದ ಉಡುಗೆತೊಟ್ಟು, ಬಳುಕಿ ನಿಲ್ಲುವ, ಕ್ಯಾಮರ ನೋಡಿ, ನಗೆ ಹೊಮ್ಮಿಸುವ ಯಾವುದೇ ಸಿನಿಮಾ ನಟಿಯೂ ಅಲ್ಲ, ನೀವೇ ನೋಡಿ, ನಿರ್ಧರಿಸಿ 'ಯಾರು' ಎಂದು! ●

# ಹಾವಾಡಿಗ


(ಉಮಾ ರಾವ್ ಕಥೆಗಳು)



✍ ಉಮಾ ರಾವ್

ಬೆಂಗಳೂರಿನ ದಕ್ಷಿಣ ವಲಯದಲ್ಲಿ ತಲೆ ಎತ್ತಿದ ಐಷಾರಾಮಿ ವಸತಿ ಸಮುಚ್ಚಯಗಳಲ್ಲಿ ಸ್ವರ್ಗ ಅಪಾರ್ಟ್ಮೆಂಟ್ಸ್ ಕೂಡ ಒಂದು. ಅದರಲ್ಲಿದ್ದ ನೂರು ಮನೆಗಳಲ್ಲಿ ವಾಸಿಸುವವರಿಗೆ ದಿನನಿತ್ಯ ಜೀವನ ಸುಖಮಯ ಸುಗಮವಾಗಿ ಮಾಡಲು ಅಷ್ಟು ಸೌಕರ್ಯಗಳನ್ನು ಒದಗಿಸಲಾಗಿತ್ತು. ಬೆಳಗಿನ ಬಿಸಿಲಲ್ಲಿ ಮಿರಮಿರ ಮಿರುಗುವ ಈಜುಕೊಳವಿತ್ತು. ಟೇಬಲ್ ಟೆನ್ನಿಸ್, ಬಿಲಿಯರ್ಡ್ಸ್ ಮುಂತಾದ ಆಟಗಳನ್ನು ಒಳಗೊಂಡ ಕ್ಲಬ್ ಹೌಸ್ ಇತ್ತು. ಬಣ್ಣಬಣ್ಣದ ಹೂಗಿಡಗಳನ್ನು ಒಳಗೊಂಡ ತೋಟವೂ. ನಡು ನಡುವೆ ಗುಲ್‌ಮೊಹರ್ ಮರಗಳು, ಅದರ ಮಧ್ಯೆ ಏಧ್ಯೆ ಹಾದು ಹೋಗುವ ಕಾಲುದಾರಿಗಳೂ ಇದ್ದುವು. ಕೋಕ್, ಪೆಪ್ಸಿ, ಕಿಟ್ ಕ್ಯಾಟ್, ರಿಗ್ರೇಸ್ ಮುಂತಾದುವನ್ನು ಮಾರುವ ಸಣ್ಣ ಅಂಗಡಿಯಿತ್ತು.

ಇಪ್ಪತ್ನಾಲ್ಕು ಗಂಟೆ ಕರೆಂಟ್ ಒದಗಿಸಲು ಜನರೇಟರ್ ವ್ಯವಸ್ಥೆ ಇತ್ತು. ಇದಕ್ಕೆಲ್ಲಾ ಕಾವಲು ಕಾಯುವ ಸೆಕ್ಯೂರಿಟಿ ಗಾರ್ಡುಗಳಿದ್ದರು. ಅಲ್ಲಿ ಮನೆಗೆಲಸ ಮಾಡಲು ಬರುವ ಹೆಂಗಸರಿಗೆ ಕನ್ನಡದ ಜೊತೆಗೆ ಹಿಂದಿ, ತಮಿಳು ಕೂಡ ಮಾತಾಡಲು ಬರುತ್ತಿತ್ತು. ಅವರಿಗೆಲ್ಲಾ ಒಂದು ಫೋಟೋ ಸಹಿತ ಐ.ಡಿ.ಕಾರ್ಡ್ ಕೊಡಲಾಗಿತ್ತು.



ಸ್ವರ್ಗ ಕಾಂಪ್ಲೆಕ್ಸ್‌ನಲ್ಲಿ ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಜನರು ವಾಸಿಸುತ್ತಿದ್ದರು. ರೆಡಿಮೇಡ್ ಗಾರ್ಮೆಂಟ್ಸ್, ಪ್ಲಾಸ್ಟಿಕ್ ಸಾಮಾನುಗಳು ಇತ್ಯಾದಿಗಳ ಸಣ್ಣಪುಟ್ಟ ಕಾರ್ಖಾನೆಗಳ ಮಾಲೀಕರು, ಅಮೆರಿಕಾ ತಮ್ಮ ಹಿತ್ತಲೆಂಬಂತೆ ಅಲ್ಲಿ ಹೋಗಿ ಬಂದು ಮಾಡುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು, ವಿದೇಶಕ್ಕೆ ತಮ್ಮ ಮಕ್ಕಳನ್ನೆಲ್ಲಾ ವಲಸೆ ಕಳಿಸಿ, ಇಲ್ಲಿ ನಾಯಿ ಸುತ್ತಿಸುತ್ತಾ ಆರಾಮ ಜೀವನ ಮಾಡುವ ನಿವೃತ್ತ ಅಧಿಕಾರಿಗಳು, ಫ್ರಿಲ್ಯಾನ್ಸ್ ಪತ್ರಕರ್ತರು, ಟೀವಿ ಸೀರಿಯಲ್ ನಿರ್ಮಾಪಕರು, ಬಹುರಾಷ್ಟ್ರೀಯ ಕಂಪನಿಗಳ ಎಕ್ಸಿಕ್ಯೂಟಿವ್‌ಗಳು ಹೀಗೆ ಎಲ್ಲರೂ ಒಬ್ಬರೊಬ್ಬರ ನಡುವೆ ಶಿಷ್ಟರಾಗಿ ವರ್ತಿಸುತ್ತಿದ್ದರು.

ಈ ನೂರು ಕುಟುಂಬಗಳ ನಡುವೆ ಆಗಾಗ ಸಣ್ಣಪುಟ್ಟ ಜಗಳಗಳೂ ನಡೆದುಹೋಗುತ್ತಿದ್ದವು. ಯಾರದೋ ಮನೆಯ ಕೆಲಸದವಳು ತಮ್ಮ ಮೆಟ್ಟಿಲುಗಳ ಮೇಲೆ ಎಲೆ ಅಡಿಕೆ ಉಗಿದಿದ್ದರ ಬಗ್ಗೆಯೋ, ತಮ್ಮ ಮನೆಯ ಪಾರ್ಟಿಯ ಮಾರನೆಯ ದಿನ ತಮ್ಮ ಕೆಲಸದವಳು ತೆಗೆದುಕೊಂಡು ಹೋಗುತ್ತಿದ್ದ ಖಾಲಿ ಬಿಯರ್ ಬಾಟಲುಗಳಲ್ಲಿ ಒಂದು ನಾಲ್ಕನ್ನು ಸೆಕ್ಯುರಿಟಿ ಗಾರ್ಡ್ ತೆಗೆದಿಟ್ಟುಕೊಂಡದ್ದರ ಬಗ್ಗೆಯೋ, ಒಬ್ಬ ಕಂಪ ಕಾರಿನ ಡ್ರೈವರ್ ಬಂದು ಹೋಗುವ ಕೆಲಸದ ಹುಡುಗಿಯರ ಮೇಲೆ ಹಿಂದಿಯಲ್ಲಿ ಕಾಮೆಂಟ್ ಮಾಡುವುದರ ಬಗ್ಗೆಯೋ ಈ ಜಗಳಗಳು ಇರುತ್ತಿದ್ದವು.

ಪ್ರತಿ ತಿಂಗಳೂ ತಪ್ಪದೆ ಆಗುತ್ತಿದ್ದ ಕಮಿಟಿ ಮೀಟಿಂಗುಗಳಲ್ಲಿ ಈ ಜಗಳಗಳ ಬಗ್ಗೆ ಚರ್ಚೆ ಆಗುತ್ತಿತ್ತು. ಆಗ ಸದಸ್ಯರೆಲ್ಲಾ ಸೇರಿ "ನಾವೆಲ್ಲಾ ಸಿವಿಲೈಜ್ ಪೀಪಲ್, ಒಳ್ಳೆ ಸಾಧಾರಣಸ್ಥರಂತೆ ಕಿತ್ತಾಡುವುದು ತಮ್ಮ ಮಟ್ಟಕ್ಕೆ ತಕ್ಕುದಲ್ಲ" ಎಂದು ಹೇಳಿಕೊಂಡು, ಮತ್ತೆ ಏನೂ ಆಗದವರಂತೆ ಒಬ್ಬರಿಗೊಬ್ಬರು ಗುಡ್‌ಮಾರ್ನಿಂಗ್, ಗುಡ್ ನೈಟ್ ಹೇಳಿಕೊಂಡು ಓಡಾಡುತ್ತಿದ್ದರು.

ಸ್ವರ್ಗ ಕಾಂಪ್ಲೆಕ್ಸ್‌ನಲ್ಲಿ ಸಮಾರಂಭಗಳಿಗೂ ಏನೂ ಕೊರತೆ ಇರಲಿಲ್ಲ. ವಾರಕ್ಕೊಂದೋ ಎರಡೋ ಬರುತ್ತಲೇ ಇದ್ದ ಹುಟ್ಟಿದ ಹಬ್ಬಗಳಿಗೆ ಮಕ್ಕಳೆಲ್ಲಾ ಹೋಗಿ ಮ್ಯಾಜಿಕ್ ಶೋ ನೋಡಿ, ಕ್ಯಾಂಡಲ್ ಊದಿ, ಕೇಕ್ ಸಮೋಸಾ ತಿಂದು, ಹ್ಯಾಪಿ ಬರ್ತ್ ಡೇ ಹಾಡಿ ಬರುತ್ತಿದ್ದರು. ಇನ್ನು ಆಗಾಗ ಆಗುತ್ತಿದ್ದ ಡಿನ್ನರ್‌ಗಳಲ್ಲಿ ಕಾಂಪ್ಲೆಕ್ಸ್‌ನವರೆಲ್ಲಾ ಸೇರುತ್ತಿದ್ದರು. "ರೋಟಿ ಸಾಗರ"ದಿಂದ ಬರುತ್ತಿದ್ದ ಪಂಜಾಬಿ ಊಟ ಹೊಡೆದು, ಬಿಯರ್ ಕುಡಿದು, ಅಂತ್ಯಾಕ್ಷರಿ ಆಡಿ, ಸರ್ದಾರ್‌ಜೀ ಜೋಕುಗಳನ್ನು ಹೇಳಿ, ತಮ್ಮ ಇತ್ತೀಚಿನ ಸಿಂಗಪುರ–ಬ್ಯಾಂಕಾಕ್, ಮಲೇಶಿಯಾ ಟ್ರಿಪ್ಪುಗಳ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದರು. ಅವರ ನಡುವೆ ಬ್ಯಾನರ್ಜಿ "ಎಲ್ಲವೂ ಮಾಡಿದ್ದೇ ಮಾಡಿ ಬೇಸರವಾಯ್ತು. ಅದಕ್ಕೇ ಈ ಸಲ ಆಫ್ರಿಕಾಗೆ ಹೋಗಿ ಬರಬೇಕೆಂದು ಇದ್ದೇನೆ" ಎಂದು ಘೋಷಿಸಿದಾಗ, ಆಫ್ರಿಕಾ, ಸಿಂಗಾಪುರ, ಬ್ಯಾಂಕಾಕಿಗಿಂತ ಹೆಚ್ಚಿನದೋ ಕಡಿಮೆಯೋ ತಿಳಿಯದೆ, ಹೇಗೆ ಪ್ರತಿಕ್ರಿಯಿಸಬೇಕೆಂದು ಅರ್ಥವಾಗದೆ, "ನೀನು ಬಿಡು, ಯೂ ಆರ್ ಡಿಫರೆಂಟ್" ಎಂದು ತೇಲಿಸಿ ಬಿಡುತ್ತಿದ್ದರು.

ಹೀಗೆ ಸರಾಗವಾಗಿ ನಡೆಯುತ್ತಿದ್ದ ಆ ಕಾಂಪ್ಲೆಕ್ಸ್‌ನ ದಿನಚರಿಯನ್ನು ಆ ಭಾನುವಾರ ನಡೆದ ಘಟನೆ ಅಲ್ಲೋಲಕಲ್ಲೋಲಗೊಳಿಸಿತು.

ಅಂದು ಬೆಳಗ್ಗೆ ಎಲ್ಲರೂ ಗಡದ್ದಾಗಿ ತಿಂಡಿ ತಿಂದು, ಪೇಪರ್ ಹಿಡಿದು ಆರಾಮವಾಗಿ ಕೂತಿದ್ದಾಗ ಸಣ್ಣ ತ್ರಿಚಕ್ರ ವಾಹನ ವೊಂದು ಕಾಂಪ್ಲೆಕ್ಸ್‌ನ ಮುಂದೆ ಬಂದು ನಿಂತಿತು. ಅದನ್ನು ಬಾಲ್ಕನಿಯಿಂದ ಗಮನಿಸಿದ ಕೆಲವು ಗೃಹಿಣಿಯರು ಯಾರದೋ ಮನೆಗೆ ಹೊಸ ಫಾಸ್ಟ್ ಫ್ರೀ ಫ್ರಿಜ್ ಬಂದಿರಬೇಕೆಂದು ಕೊಂಡು ಒಳಗೆ ಹೋದರು. ಆದರೆ ಸ್ವಲ್ಪ ಹೊತ್ತಿನ ನಂತರ ಏರುದನಿಯಲ್ಲಿ ನಡೆಯುತಿದ್ದ ವಾಗ್ವಾದ ಕೇಳಿ ಕೆಲವರು ಮತ್ತೆ ತಮ್ಮ ಬಾಲ್ಕನಿಗಳಿಗೆ ಮರಳಿ ಬಂದರು. ಆ ಬಿಲ್ಲಿಂಗ್ ರೆಸಿಡೆಂಟ್ಸ್ ಸೊಸೈಟಿಯ ಸೆಕ್ರೆಟರಿ ರಾಧಾಕೃಷ್ಣನ್ ಕೈಯಲ್ಲಿ "ಡೆಕ್ಕನ್ ಹೆರಾಲ್ಡ್" ಹಿಡಿದೇ ಕೆಳಗಿಳಿದು ಬಂದರು. ಅಲ್ಲಿ ವಿಚಿತ್ರ ವೇಷದ ವ್ಯಕ್ತಿಯೊಬ್ಬ ಕೈಯಲ್ಲಿರುವ ಕಾಗದ ಪತ್ರಗಳನ್ನು ಸೆಕ್ಯೂರಿಟಿ ಗಾರ್ಡುಗಳ ಮುಂದೆ ಹಿಡಿದು ವಾದಿಸುತ್ತಿದ್ದ. ರಾಧಾಕೃಷ್ಣನ್ ಹತ್ತಿರದಿಂದ ಆ ವ್ಯಕ್ತಿಯನ್ನು ಕೂಲಂಕಷವಾಗಿ ಪರೀಕ್ಷಿಸಿದವರೇ ಸ್ವಲ್ಪ ಕಸಿವಿಸಿಗೊಂಡರು. ಚೌಕಳಿ ಚೌಕಳಿಯ ತುಂಡು ಪಂಚೆ, ತೆಳುವಾದ ಅರ್ಧತೋಳಿನ ಜುಬ್ಬಾ, ದಟ್ಟ ಮೀಸೆ. ಹಣೆಯಲ್ಲಿ ವಿಭೂತಿ, ಕುಂಕುಮ, ಕತ್ತಿನಲ್ಲಿ ಬಣ್ಣ ಬಣ್ಣದ ಮಣಿಗಳು, ರುದ್ರಾಕ್ಷಿಹಾರದ ಜೊತೆಗೆ ಕರಿದಾರದಿಂದ ನೇತಾಡುತ್ತಿರುವ ತಾಯಿತ. ಹೆಗಲಿನಿಂದ ಜೋತುಬಿದ್ದ ಒಂದು ಗುಂಡು ಬುಟ್ಟಿ, ಆ ಬುಟ್ಟಿ ಮುಚ್ಚಿಯೇ ಇದ್ದರೂ ನೋಡಿದ ತಕ್ಷಣ ಯಾರಿಗಾದರೂ ತಿಳಿಯಲೇ ಬೇಕು ಅದರಲ್ಲೇನಿದೆಯೆಂದು.

ರಾಧಾಕೃಷ್ಣನ್ ಗಾರ್ಡ್ ಕಡೆ ತಿರುಗಿ "ಏನಯ್ಯಾ ಇವನ ಜೊತೆ ಏನು ವಾದ. ಇಂಥ ಹಾವಾಡಿಗರು. ದೊಂಬರಾಟದವರನ್ನೆಲ್ಲಾ ಸುಮ್ಮಸುಮ್ಮನೆ ಕಾಂಪ್ಲೆಕ್ಸ್ ಒಳಗಡೆ ಬಿಡಬಾರದೆಂದು ಎಷ್ಟು ಸಲ ಹೇಳಿಲ್ಲ?" ಎಂದು ರೇಗಿದರು.

ಗಾರ್ಡ್ "ಇಲ್ಲ ಸಾರ್... ಇವರು..." ಎಂದು ತೊದಲಿದಾಗ ಹಿಂದಿನಿಂದ ಪ್ರತ್ಯಕ್ಷನಾದ ಎಡ್ಮಿನಿಸ್ಟ್ರೇಟಿವ್ ಮ್ಯಾನೇಜರ್ ಶಶಿಧರ "ಇಲ್ಲ ಇವರು... 'ಎ' ಬ್ಲಾಕಿನಲ್ಲಿ... ಬಾಡಿಗೆಗೆ ಬಂದಿದ್ದಾರೆ..." ಎಂದು ವಿವರಿಸಿದ.

"ಆಂ?" ಮುವತ್ತು ವರ್ಷ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಬದುಕು ಸವೆಸಿದ್ದ ರಾಧಾಕೃಷ್ಣನ್‌ಗೆ ಹರ್ಷದ್ ಮೆಹತಾ ನಾಟಕಗಳು ಕೂಡ ಇಂತಹ ಶಾಕ್ ಕೊಟ್ಟಿರಲಿಲ್ಲ.

ಶಶಿಧರ ತನ್ನ ಕೈಯಲ್ಲಿದ್ದ ಅಗ್ರಿಮೆಂಟ್ ಕಾಪಿ ರಾಧಾಕೃಷ್ಣನ್ ಮುಂದೆ ಹಿಡಿಯುತ್ತಾ "ಎಲ್ಲಾ ಪೇಪರ್ಸ್ ಆರ್ಡರ್‌ನಲ್ಲಿದೆ ಸರ್. ಓನರ್ ನಮಗೆ ಬರೆದಿರೋ ಕಾಗದಾನೂ ಜೊತೆಗೆ ತಂದಿದ್ದಾರೆ" ಎಂದಾಗ ರಾಧಾಕೃಷ್ಣನ್ ಹಾಗೇ ಶಶಿಧರನನ್ನು ಪಕ್ಕಕ್ಕೆ ಕರೆದರು. ಶಶಿಧರ "ನಾನು ಒಳಗೆ ಹೋಗಿ ಚೆಕ್ ಮಾಡಿದೆ ಸರ್, ಚೆಕ್ ಟ್ಯಾಲಿ ಆಗುತ್ತೆ" ಎಂದಾಗ ಓನರ್‌ಗೆ "ಫೋನ್ ಮಾಡಿ ಕೇಳೋ" ಎಂದು ಅಸಹನೆಯಿಂದ ಗುಡುಗಿದರು. "ಟ್ರೈ ಮಾಡ್ದೆ ಸಾರ್. ಅವರು ಅಮೆರಿಕಾಗೆ ಮಗನ ಮನೆಗೆ ಹೋಗಿಬಿಟ್ಟಿದ್ದಾರೆ" ಎಂದಾಗ ಇವರಿಗೆಲ್ಲಾ ಬೇರೆ ದಾರಿಯೇ ಇಲ್ಲದಂತಾಯಿತು.

ಇದೆಲ್ಲಾ ಸುದ್ದಿ ಬಿಲ್ಡಿಂಗ್‌ನಲ್ಲಿ ಹರಡಿ ಎಲ್ಲರೂ ಭಾನುವಾರ ಬೆಳಗ್ಗೆಯ ತಮ್ಮ ಕೆಲಸಗಳನ್ನು ಒತ್ತಟ್ಟಿಗಿಟ್ಟು ಬಾಲ್ಕನಿಗೆ ಬಂದು ನಿಂತರು. ಮಕ್ಕಳೆಲ್ಲಾ ಕೆಳಗಡೆ ಸೇರಿ ಆ ಹಾವಾಡಿಗನ ಸುತ್ತ ಗುಂಪುಕಟ್ಟಿದರು. ಅವನು ಮಾತ್ರ ಇದ್ಯಾವುದರಿಂದಲೂ ವಿಚಲಿತ ನಾಗದೆ ತನ್ನ ಪಾಡಿಗೆ ತಾನು ತ್ರಿಚಕ್ರ ವಾಹನದಿಂದ ಸಾಮಾನುಗಳನ್ನು ಕೆಳಗಿಳಿಸತೊಡಗಿದ. ಅವನು ತಂದಿದ್ದೋ ಒಂದು ಚಾಪೆ ಸುತ್ತಿದ ಹಾಸಿಗೆ, ಒಂದನ್ನು ಸಾಕ್ಷಿ ಪಡಗ ಎರಡು ಮಡಕೆ, ಒಂದು ಸೀಮೆಣ್ಣೆ ಸ್ಟೊವ್, ನಾಲ್ಕೈದು ದೇವರ ಪಟಗಳು ಬೆಡ್ ಶೀಟಿನಲ್ಲಿ ಸುತ್ತಿದ್ದ ಬಟೆಗಳ ಗಂಟು, ಕೋಲು, ಒಂದು ಗೋಣಿಚೀಲದ ತುಂಬ ಮೇಲೆ ಹಾಕಿಕೊಂಡಿದು ಒಂದರೊಳಗೊಂದು ಸೇರಿಸಿ ದಾರ ಕಟ್ಟಿದ ಎರಡು ಮುಖ ಏನೇನೋ ಸಾಮಾನುಗಳು... ಕೊನೆಗೆ ತುಂಬಾ ಹುಷಾರಾಗಿ ಇಳಿಸಿಕೊಂಡು ಕೋಲಗಳನ್ನು. ಇದನ್ನು ಕಂಡ ತಕ್ಷಣ ಎಲ್ಲರಿಗೂ ಮೈ ಜುಂ ಎಂದಿತು.

ಅವನ್ನೆಲ್ಲಾ ಒಂದೊಂದಾಗಿ ತಾನೇ ಎತ್ತಿಕೊಂಡು ಹೋಗಿ "ಎ" ಬ್ಲಾಕಿನ ಮೂರು ಮಹಡಿಯಲ್ಲಿದ್ದ ತನ್ನ ಮನೆಯೊಳಗೆ ಇಡತೊಡಗಿದ. ಮಾಮೂಲಿನಂತೆ ಸಾಮಾನೆ ಇಡಲೋ ಬೇಡವೋ ಎಂದು ಅನುಮಾನಿಸುತ್ತಿದ್ದ ಸೆಕ್ಯೂರಿಟಿ ಗಾರ್ಡಿಗೆ ರಾಧಾಕೃಷ್ಣನ ಬೇಡವೆಂದು ಕಣ್ಣಲ್ಲೇ ಎಚ್ಚರಿಸಿದರು. ಈ ಮಧ್ಯೆ ತುಂಟ ಡಿಂಪಿ ಹಾವಾಡಿಗನು ಹತ್ತಿ ಬಂದು ಆ ಬುಟ್ಟಿ ತೋರಿಸುತ್ತಾ "ಅಂಕಲ್, ಇದರಲ್ಲಿ ಹಾವಿದೆಯಾ?" ಎಂದು ಕಳ ಅಮ್ಮನ ಕೈಯಲ್ಲಿ ಏಟು ತಿಂದ. ಹೊಸದಾಗಿ ವಾಸಿಸಲು ಬಂದವರು ಹೆಸರು, ವ್ಯಕ್ತಿ ಇತ್ಯಾದಿ ದಾಖಲಿಸುವ ರಿಜಿಸ್ಟರಿನಲ್ಲಿ ಶಂಭು, ಹಾವಾಡಿಗ–ಎ–30 ಎಂದು ತುಂಬು ಸಹಿಗಾಗಿ ರಾಧಾಕೃಷ್ಣನ್ ಹತ್ತಿರ ಬಂದಾಗ ಶಶಿಧರನ ಮೇಲೆ ಅವರು ಕೆಂಡವಾದರು "ಏನಯ್ಯಾ ಇದು. ಅಷ್ಟು ಬುದ್ಧಿ ಬೇಡವೇ? ಪ್ರೊಫೆಶನ್ ಅನ್ನೋ ಕಡೆ ಬಿಸಿನೆಸ್ ಅಂತ ಬರಿ..." ಎಂದು ಗದರಿದರು. ಕಾಲುಗಂಟೆಯಲ್ಲಿ ಅಷ್ಟೂ ಸಾಮಾನು ಒಳಗೆ ಸಾಗಿಸಿದ ಶಂಭು ಮನೆ ಬಾಗಿಲು ಹಾಕಿ, ಬಾಲ್ಕನಿ ಬಾಗಿಲು ತೆಗೆದುಬಿಟ್ಟ. ಆಕ್ಷದಿಂದ "ಸ್ವರ್ಗ ಅಪಾರ್ಟ್‌ಮೆಂಟ್ಸ್‌ನ ನಿವಾಸಿಗಳ ಬದುಕಿನಲ್ಲಿ ವಿಚಿತ್ರ ಅಶಾಂತಿ ಪ್ರಾರಂಭವಾಯಿತು.

ತಂದೆ ತಾಯಿ ತಮ್ಮ ಮಕ್ಕಳಿಗೆ ವಿಶೇಷ ಎಚ್ಚರ ಕೊಟ್ಟರು. ಶಂಭು ಜೊತೆಗೆ ಮಾತನಾಡಬಾರದೆಂದೂ, ಅವನು ಕರೆದರೂ ಅವನ ಮನೆಗೆ ಹೋಗಬಾರದೆಂದೂ ಪೆಪ್ಪರಮಿಂಟ್, ಚಾಕಲೇಟ್ ಕೊಟ್ಟರೆ ಮುಟ್ಟಬಾರದೆಂದೂ ಹೇಳಿದರು. ಎ–ಯಲ್ಲಿದ್ದ ಸೀತಾಚಂದ್ರನ್ "ನಮ್ಮ ಪಾಡಿಗೆ ನಾವಿದ್ದೆವಲ್ಲಾ... ಇದೆಲ್ಲಿ ಬಂತು ಗ್ರಹಚಾರ.., ಸಕ್ಕರೆ, ಕಾಫಿಪುಡಿ, ಸಾಲ ಕೇಳಲೂ ಅಕ್ಕಪಕ್ಕದವರಿಲ್ಲದಂತಾಯಿತಲ್ಲಾ..." ಎಂದು ಕಣ್ಣೀರೇ ಇಟ್ಟರು.

(ಮುಂದುವರಿಯುವುದು....

# ಶತಮಾನೋತ್ಸವದ ಸಂಭ್ರಮದಲ್ಲಿ ಮೈಸೂರು ಅಸೋಸಿಯೇಷನ್
# ಬಿ. ವಿ. ಕಾರಂತರ ಸಂಸ್ಮರಣೆ

ಮೂರು ದಿನಗಳ ಕನ್ನಡ ನಾಟಕೋತ್ಸವ ಬೆನಕ ತಂಡ, ಬೆಂಗಳೂರು ಇವರಿಂದ ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ಅಕ್ಟೋಬರ್ 31, 2025ರಿಂದ ನವೆಂಬರ್ 02, 2025ರ ತನಕ ಯಶಸ್ವಿಯಾಗಿ ನೆರವೇರಿತು.



ನಾಟಕ – **ಸತ್ತವರ ನೆರಳು**
ಮೇರು ಕೃತಿ : **ಜಿ. ಬಿ. ಜೋಶಿ**
ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**
ಮರು ವಿನ್ಯಾಸ: **ಡಾ. ಟಿ. ಎಸ್. ನಾಗಾಭರಣ**

ಮುಂಬಯಿಯ ಮೈಸೂರು ಅಸೋಸಿಯೇಶನ್‌ನ ಶತಮಾನೋತ್ಸವ ಮತ್ತು ಬೆಂಗಳೂರಿನ ನಾಟಕ ವೃಂದ 'ಬೆನಕ' ದ ಅರ್ಧ ಶತಮಾನೋತ್ಸವಗಳ ಪೂರ್ಣ ಗೃಹಣ ಕಾಲದಲ್ಲಿ (31.10.2025), 'ಸತ್ತವರ ನೆರಳು' ನಾಟಕದ 623ನೇ, ಪ್ರಯೋಗದ ಪ್ರೇಕ್ಷಣೆ, ಮುಂಬಯಿಯ ಮೈಸೂರು ಆಡಿಟೋರಿಯಮ್‌ನಲ್ಲಿ ಯಶಸ್ವಿಯಾಗಿ ನೆರವೇರಿತು!

ಪುರಂದರದಾಸರು ತಮ್ಮ 80 ವರ್ಷಕ್ಕೂ ಮಿಕ್ಕಿದ ಜೀವಮಾನದಲ್ಲಿ, 84ಕ್ಕೂ ಮಿಕ್ಕಿ ಹೊಸ ರಾಗಗಳನ್ನು ನೀಡಿ, ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಶ್ರೀಮಂತಗೊಳಿಸಿದ್ದಾರೆ. ಶ್ರೀಮಂತ ವ್ಯಾಪಾರಿಯ ಮಗನಾಗಿ ಹುಟ್ಟಿದ ಶ್ರೀನಿವಾಸ ನಾಯಕ, ತನ್ನ ಹೆಂಡತಿಯ ಮೂಗುತಿಯ ಪ್ರಮಾದದ ಪ್ರಮೇಯದಿಂದ ದಾಸನಾಗಿದ್ದರಿಂದ, ಕನ್ನಡದ ಸಂಗೀತ ಸಮೃದ್ಧವಾಯಿತು. ಗಾಯನ ಮತ್ತು ಸಂಯೋಜನೆ ಪುರಂದರ ದಾಸರಿಗೆ ದೈವೀದತ್ತವಾಗಿ ಬರದಿದ್ದರೆ, ಕನ್ನಡದ ಆಡುಭಾಷೆ, ಸಂಗೀತ ಶ್ರಾವ್ಯತೆಯ ಹಾಗೂ ಆಧ್ಯಾತ್ಮಿಕ ಎರಕದಲ್ಲಿ ಭೌತಿಕ ಪ್ರಪಂಚದ ಮಿಥ್ಯ – ಸತ್ಯಗಳ ಜೋರಿನಲ್ಲಿ ಮೆರೆಯುವುದಾದರೂ ಹೇಗೆ?



ಒಬ್ಬ ಶ್ರೀಮಂತ, ದಾಸನಾಗುತ್ತಾನೆ; ಶ್ರೀಮಂತ ದಾಸನಾಗುತ್ತಾನೆ. ಮತ್ತೊಮ್ಮೆ ಓದಿ ನೋಡಿ: ಓದಿದರೂ ಸತ್ಯ, ಕೇಳಿದರೂ ಸತ್ಯ! ಕಾಲ ಕಳೆಯುತ್ತದೆ; ಮೌಲ್ಯ ಉಳಿಯುತ್ತದೆ, ವರ್ಷ ಐವತ್ತಲ್ಲ, ಮತ್ತೆ ಐವತ್ತು ಶೂನ್ಯಗಳನ್ನು ಸೇರಿಸಿದರೂ ಕೂಡ!!

'ಸತ್ತವರ ನೆರಳು' ಧಾರವಾಡದ 'ಮನೋಹರ ಗ್ರಂಥಮಾಲೆ'ಯ ಶಿಲ್ಪಕಾರ, ಜಿ. ಬಿ. ಜೋಶಿಯವರ ಲೇಖನಿಯಿಂದ ಮೂಡಿದ ನಾಟಕ ರೂಪದಲ್ಲಿ, ಇಚ್ಛೆಯಿಲ್ಲದ ನಾರಾಯಣನನ್ನು, ಒಬ್ಬ ದಿವಾನ, ಸತ್ತ ಮಠಾಧೀಶರ ಜಾಗದಲ್ಲಿ, ಬಲವಂತವಾಗಿ, ತನ್ನ ಸ್ವಾರ್ಥ ಹೇತು, ಜನರ ಅಪಾರ ನಂಬಿಕೆಯ ಆಧಾರಕ್ಕೆಂದು ತಂದಾಗ ಜರುಗುವ, ಹಿನ್ನೆಲೆಯಲ್ಲಿ ನಡೆಯುವ ಸತ್ಯ–ಮಿಥ್ಯೆಗಳ ಒಂದು ಪ್ರಕ್ರಿಯೆ. ಸಂಭಾಷಣೆಯ ಉಯ್ಯಾಲೆ, ಶಬ್ದಗಳ ತಾಕತ್ತಿನಲ್ಲಿ, ಪ್ರೇಕ್ಷಕರನ್ನು ವಿಚಾರ ಮಂಥನದಲ್ಲಿ ಮುಳುಗಿಸುತ್ತಿದ್ದರೆ, ಪುರಂದರ ದಾಸರ ಸಂಯೋಜನೆಗಳನ್ನು ನಿರ್ದಿಷ್ಟವಾಗಿ ದುಡಿಸಿಕೊಂಡ ಸಂಗೀತ ಅರ್ಥಬದ್ಧವೂ, ಲಕ್ಷ್ಯಬಿಂದುವೂ ಆಗಿ, ಎಳೆಗಳ ಹೊಳವಿನಲ್ಲಿ ನಿರ್ದಿಷ್ಟವಾಗುತ್ತ ಆಳಕ್ಕೆ ಇಳಿಸುತ್ತದೆ, ಸ್ಪಷ್ಟತೆಗೆ ಇಂಬು ಕೊಡಿಸುತ್ತದೆ.



ನಾಟಕ ನಿರ್ದೇಶನವನ್ನು ಕೂಲಂಕುಷವಾಗಿ ಗಮನಿಸಿದರೆ, ಟಿಬ್ಬಿ ಹೊಲಿಗೆಯ ಕೌಶಲ್ಯ ಸ್ಫುಟವಾಗುತ್ತದೆ: 'ಸಂಗೀತ'ದ ಒಂದು ದಾರ ನೇರ ಮಾರ್ಗದಲ್ಲಿ ಹೋಗುತ್ತಿದ್ದರೆ, 'ಪ್ರಹಸನ'ದ ಮತ್ತೊಂದು ದಾರ ಗೋಲವಾಗುತ್ತ, ನೇರಕ್ಕೆ ಸೇರ್ಪಡೆ ಯಾಗುತ್ತ, ಕುಸುರಿಯಾಗುತ್ತದೆ. ಟಿಬ್ಬಿ, ಒಂದು ದೃಷ್ಟಿಯಲ್ಲಿ ನಿರ್ದೇಶನದ 'ಆಯಾಮ'ವಾದರೆ, ಮತ್ತೊಂದು ದೃಷ್ಟಿಯಲ್ಲಿ 'ಛಂದಸ್ಸಾ'ಗುತ್ತದೆ!

ಜಿ. ಬಿ. ಜೋಶಿಯವರು ಈ ನಾಟಕವನ್ನು ಬರೆಯುತ್ತಿರುವಾಗ, ಅವರು ಪುರಂದರ ದಾಸರ ಜೀವನ ಗಾನದ, ಗಾಥೆಯ ಪ್ರಭಾವದಿಂದ ಪ್ರೇರಿತರಾಗಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ, ಪುರಂದರದಾಸರ ಮಾರ್ಮಿಕ ಗಾಯನಗಳನ್ನು, 'ಸತ್ತವರ ನೆರಳು' ನಾಟಕದುದ್ದಕ್ಕೂ ಸಮರ್ಥವಾಗಿ ಉಪಯೋಗಿಸಿದ ರೀತಿಗೆ 'ಕ್ಷ' ಕಿರಣ ಬೀರಿದಾಗ, ಕಾರಂತರು, ಶತಮಾನಗಳ ನಂತರ, 'ದಾಸ'ರ ಪುನರಾಗಮನದ ಅಪರಾವತಾರವೇನೋ ಎಂಬ ಶಂಕೆ ಉತ್ಪತ್ತಿಯಾದರೆ, ಅದು ಮಿಥ್ಯವಾಗಲಾರಾದು!!



ಸತ್ಯ–ಮಿಥ್ಯಗಳ ತಥ್ಯವನ್ನು ಅರೆದು ಕುಡಿದ ಪುರಂದರದಾಸರ ಪ್ರೇರಣೆಯನ್ನು 'ಸತ್ತವರ ನೆರಳಿ'ನಲ್ಲಿ ರಸವತ್ತಾಗಿ ಬಿಂಬಿಸಿದ ಬಿ. ವಿ. ಕಾರಂತ; ಸದಾ ಜೀವಂತ!

ಅಂತೂ ಈ ತ್ರಿಕೂಟ ಶಕ್ತಿಯ 'ಸತ್ತವರ ನೆರಳು' ನಾಟಕ, 'ನಾಗಾಭರಣ'ರ ಮರು ವಿನ್ಯಾಸದ ನಿರ್ದೇಶನದಲ್ಲಿಯೂ, ಪ್ರತಿಪಾದಿಸುವುದಕ್ಕೆ ಕುಮ್ಮಕ್ಕು ಜೋಡಿಸಿದ್ದು ಏನು?

'ಸತ್ಯ'ವೇ ಶಾಶ್ವತವೆಂದಾದರೆ, ಈ ಪ್ರಪಂಚವು ಸತ್ಯವೇ? 'ಸಾವು' ಸತ್ಯವೆಂದಾದರೆ, ಸತ್ತವರ ನೆರಳಿನಲ್ಲಿ ಹುಡುಕುತ್ತಿದ್ದಾಗ ಸಿಗುವುದೇನು? ಈ ಪ್ರಶ್ನೆಗಳಿಗೆ ಸರಿಯಾದ ಪರಿಭಾಷೆ ಬೇಕೇ? ಮತಿಗೆ ಗತಿ ಸಿಗುವ 'ಸತ್ತವರ ನೆರಳು' ನಾಟಕವನ್ನು ನೋಡುತ್ತೀರಿ, ಅಷ್ಟೊಂದು ಜೀವಂತ ರಚನೆಯಿದು, ರನ್ನನೆಯಿದು!

'ಸತ್ತವರ ನೆರಳು' ನಾಟಕದ ವಸ್ತು, ಪ್ರಾಸಂಗಿಕವಾಗಿ ಒಂದು ಮಠದ ಸುತ್ತ ನಡೆಯುವ ಸಂಗತಿಯಂತೆ ತೋರಿದರೂ, ಅದರ ಸಹಜವಾದ ಭರ್ಜರಿ ಸಂದೇಶ ನಮ್ಮೆಲ್ಲರ ಇಹ ಬದುಕಿನ ಸಾರ್ವತ್ರಿಕ ಹಿನ್ನೆಲೆಯಲ್ಲಿ ಅರಳುವ ಕಾಲವನ್ನು ಮೀರುವ ಸತ್ಯವೇ ಆಗಿರುವುದರಿಂದ, ಭವಿಷ್ಯದಲ್ಲಿ, ಈ ನಾಟಕ, ಕನ್ನಡ ನಾಟಕ ಲೋಕದ ಆಸ್ತಿಯೇ ಆಗಲಿದೆ.

## ಎರಡನೆಯ ದಿನ

**ಹಯವದನ** – ನಾಟಕ

ಮೇರು ಕೃತಿ : **ಗಿರೀಶ್ ಕಾರ್ನಾಡ**

ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**

ಮರು ವಿನ್ಯಾಸ : **ಡಾ. ಟಿ. ಎಸ್. ನಾಗಾಭರಣ**



ಗಿರೀಶ್ ಕಾರ್ನಾಡರ, 'ಹಯವದನ' ನಾಟಕದ 509ನೇ, ಪ್ರಯೋಗದ ಪ್ರೇಕ್ಷಣೆ, ಯಶಸ್ವಿಯಾಗಿ ನೆರವೇರಿತು!

ಈ ನಾಟಕದಲ್ಲಿ ಬರುವ 'ದೇವದತ್ತ' ಸುಂದರ, ಸ್ಫುರದ್ರೂಪಿ, ವಿವೇಕ ಉಳ್ಳವ, ಬ್ರಾಹ್ಮಣ; 'ಕಪಿಲ' ಒಳ್ಳೆ ಮೈಕಟ್ಟಿನವ, ಬಲಶಾಲಿ, ನಿಮ್ನ ವರ್ಗದವ. ಆದರೆ ಅವರಲ್ಲಿ ಅಯಸ್ಕಾಂತೀಯ ಸ್ನೇಹ. 'ಪದ್ಮಿನಿ', ಯುವತಿ, ದೇವದತ್ತನನ್ನು ವರಿಸಿದರೂ, ಕಪಿಲನ ಗುಣಕ್ಕೆ ಆಕರ್ಷಿತಳಾದವಳು. ದೇವದತ್ತ, ಪದ್ಮಿನಿಯ ಈ ಸ್ವಭಾವದ ಅಸಹ್ಯತನದಲ್ಲಿ ತನ್ನ ತಲೆಯನ್ನೇ ಕತ್ತರಿಸಿಕೊಳ್ಳುತ್ತಾನೆ, ಕಾಳಿಯ ಎದುರಲ್ಲಿ. ನಂತರ ಬಂದ ಕಪಿಲ ತನ್ನ ಅಪ್ರತಿಮ ಸ್ನೇಹಿತನನ್ನು ಕಳೆದುಕೊಂಡಿದ್ದಕ್ಕೆ, ತಾನೂ ತಲೆಯನ್ನು ಕತ್ತರಿಸಿಕೊಳ್ಳುತ್ತಾನೆ. ಕಾಳಿಯ ವರದಿಂದ, ಮರು ಬದುಕಿಗೆ ಅವಕಾಶ ಸಿಕ್ಕರೂ, ಪದ್ಮಿನಿಯ ಪ್ರಮಾದದಿಂದ, ಜೋಡಿಸುವಾಗ ಅವರಿಬ್ಬರ ತಲೆಗಳು ಅದಲು ಬದಲಾಗುತ್ತವೆ.



ತಲೆ ದೇವದತ್ತನದು, ಶರೀರ ಕಪಿಲನದು, ಶರೀರ ದೇವದತ್ತನದು, ತಲೆ ಕಪಿಲನದು. ಪದ್ಮಿನಿ, ದೇವದತ್ತನ ತಲೆಯುಳ್ಳ ಕಪಿಲನ ಶರೀರವನ್ನು ಮದುವೆಯಾಗಿ ಬಾಳುತ್ತಿದ್ದರೂ, ಸ್ವಂತ ಅಸ್ತಿತ್ವ ಹಾಗೂ ಪರಿಪೂರ್ಣತೆ ಇಲ್ಲದ ಜಂಜಡದಿಂದ, ಸಮಸ್ಯೆ ಇನ್ನೂ ಕ್ಲಿಷ್ಟವಾಗುತ್ತದೆ. ಹುಟ್ಟಿದ ಮಗ ಮಾತನಾಡದೆ, ಕೊನೆಯಲ್ಲಿ ಬರುವ 'ಹಯವದನ'ನನ್ನು ನೋಡಿ, ಅವನ ಕತೆಯನ್ನು ಕೇಳಿದ ನಂತರ ನಕ್ಕಾಗ, ಈ ಸಮಸ್ಯೆಗೆ ಆತ್ಮಹತ್ಯೆಯೊಂದೇ ಉತ್ತರವಾಗುತ್ತದೆ – ಪದ್ಮಿನಿಗೆ



ಕೂಡ, ಅವರಿಬ್ಬರನ್ನೂ ಕಳೆದು ಕೊಂಡು, ಬದುಕಿನ ಮುಂದಿನ ದಾರಿ ಕಾಣದಿದ್ದುದಕೆ.

'ದೇವದತ್ತ' – ಬುದ್ಧಿ, ವಿವೇಕ, ಮಿದುಳಿನ ಪ್ರತೀಕ. 'ಕಪಿಲ' – ಭಾವನೆ, ಕಕ್ಕುಲತೆ, ಹೃದಯದ ಪ್ರತೀಕ. 'ಪದ್ಮಿನಿ' – ಎಲ್ಲ ಒಳ್ಳೆಯುದನ್ನೆಲ್ಲ ತನ್ನದಾಗಿಸಿ ಕೊಳ್ಳಬೇಕೆಂಬ ಮನುಷ್ಯನ ಅಸಹಜವಲ್ಲದ ಮಹತ್ವಾಕಾಂಕ್ಷೆಯ, ಹಂಬಲದ ಪ್ರತೀಕ. ಈ ತ್ರಿಕೋನ ಆಯಾಮದಲ್ಲಿ, ತುಮುಲಗಳು ಸಹಜವೇ! ಇಂತಹ ಒಂದು ಜಟಿಲವಾದ ಸಮಸ್ಯೆಯನ್ನು, ಆನೆ ಮುಖವುಳ್ಳ 'ಗಣೇಶ' ಹಾಗೂ ಕುದುರೆ ಮುಖವುಳ್ಳ 'ಹಯವದನ'ಗಳ ಮೂಲಕ ಪ್ರತಿನಿಧಿಸಿ, ಸಮಾಧಾನದ ಪರಿಹಾರ ಕಂಡುಕೊಳ್ಳುವ ಪ್ರಯತ್ನವನ್ನು ಕಾರ್ನಾಡರು ಮಾಡಿದ್ದಾರೆ, ನಾಟಕದ ಸಂಕೇತಗಳಿಂದ.

ಕೂಲಂಕುಷವಾಗಿ, ಇನ್ನೂ ಒಂದು ಮಾತು ಹೇಳಬೇಕೆಂದರೆ, ಕಾರ್ನಾಡರು, ಈ ನಾಟಕದಲ್ಲಿ, ಶಾಪದಿಂದ 'ಹಯವದನ' ವಾದವನ ಸಮಸ್ಯೆಯನ್ನೂ, ದೇವದತ್ತ–ಕಪಿಲ–ಪದ್ಮಿನಿಯರ ಬದುಕಿನ ತ್ರಿಕೋನ ಸಮಸ್ಯೆಯನ್ನೂ, ಪ್ರೇಕ್ಷಕರಿಗೆ ಉದ್ದಕ್ಕೂ ಕತೆ ಹೇಳುವ 'ಭಾಗವತ'ನ ಮೂಲಕ, ಬಗೆಹರಿಸುತ್ತಾರೆ!



'ಹಯ ವದನ' ಕುದುರೆ ಮುಖ ಉಳ್ಳವನು, 'ಗಣೇಶ' ಆನೆಯ ಮುಖ ಉಳ್ಳವನು. ನಾಟಕ ಶುರುವಾಗುವುದೇ ಈ ಆಭಾಸದಿಂದ. ಪುರಾಣ, ಜಾನಪದಗಳ ಮಿಶ್ರಣದಿಂದ ಬುಡದಿಂದ ಕೊನೆಯವರೆಗೂ, ಅಲ್ಲಿ ವಿಚಾರ, ಭಾವನೆಗಳ ಕೋಲಾಹಲ ನಡೆಯುತ್ತಲೇ ಇರುತ್ತದೆ.

ಮನುಷ್ಯನಿಗೆ ಮಿದುಳೂ ಇದೆ, ಹೃದಯವೂ ಇದೆ. ಎರಡೂ ಇದ್ದಾಗ ಮಾತ್ರ ಆತ ಜೀವಂತವಾಗಿರಲು ಸಾಧ್ಯ! ಮಿದುಳು ಕಾರ್ಯಗತವಾಗುವದು ತರ್ಕದಿಂದ ಮಾತ್ರ; ಹೃದಯ ಕೆಲಸ ಮಾಡುವದು ಕೇವಲ ಭಾವನೆಗಳ ಸ್ಪಂದನೆಯಿಂದ. ಮಿದುಳಿನಲ್ಲಿ ಹೃದಯವಿಲ್ಲ; ಹೃದಯದಲ್ಲಿ ಮಿದುಳಿಲ್ಲ. ಅಂದರೆ, ತರ್ಕವಿದ್ದಲ್ಲಿ ಭಾವನೆಯಿಲ್ಲ; ಭಾವನೆಯಿದ್ದಲ್ಲಿ ತರ್ಕವಿಲ್ಲ. ಎರಡೂ ಇರದಿದ್ದರೆ, ಮನುಷ್ಯನೇ ಇಲ್ಲ. ಮಿದುಳು ಜಾಗೃತವಾಗಿದ್ದಾಗ, ಗಡಸುತನ, ಗಂಡಸುತನ, ಕ್ರೂರತನ, ಕೊಲ್ಲುವ ಭಾವ. ಹೃದಯ ಜಾಗೃತವಾಗಿದ್ದಾಗ, ಮೃದುತ್ವ, ಪ್ರೀತಿ, ಪ್ರೇಮ, ನಮ್ರತೆ, ಸೌಮ್ಯ ಭಾವ. ಅವೆರಡೂ ಸ್ವಭಾವತಃ ಭಿನ್ನ; ಸಮಾಂತರ. ಈ ದ್ವಂದ್ವವೇ ಪ್ರಪಂಚದ ಅಧಿ–ನಿಯಮವಾದರೆ, 'ಆಸೆ' ಅನ್ನುವದು IDEAL, 'ವಸ್ತುಸ್ಥಿತಿ' ಅನ್ನುವದು ಖಇಂಐ ಆಗುತ್ತದೆ. ಇಲ್ಲಿ, 'IDEAL' ಬಗೆಗಿನ ವ್ಯಾಖ್ಯೆಯನ್ನೂ ಅಲ್ಲಗಳೆಯುವಂತಿಲ್ಲ: "Idealism is that which never touches the Real!"

ಅಂತೂ , ಇಂತಹ 'ಆಸೆ'ಯನ್ನು 'ವಸ್ತುಸ್ಥಿತಿ'ಯೊಂದಿಗೆ ಸಮಜಾಯಿಷಿಗೊಳ್ಳುವ ಅಂತ್ಯದಲ್ಲಿ, 'ಸಾವು' ಒಂದೇ, ಈ ತುಮುಲಕ್ಕೆ ಉತ್ತರವಾಗುತ್ತದೆ!

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪರಾಮರ್ಶಿಸುವದಾದರೆ, ಶಂಕರಾಚಾರ್ಯರ 'ಅದ್ವೈತ' ಸಿಧ್ಧಾಂತದ ಪ್ರಕಾರ, ಈ ಜಗತ್ತಿನ ಎಲ್ಲಾ ಜೀವಿಗಳೂ ಒಂದೇ. ಆತ್ಮ, ಪರಮಾತ್ಮ ಎಂಬ ಭೇದವಿಲ್ಲ. ಆತ್ಮನಲ್ಲೇ ಪರಮಾತ್ಮನಿದ್ದಾನೆ. ಅವುಗಳಲ್ಲಿರುವ ಅಂತಃಸತ್ವ ಒಂದೇ. ಅವು ಬೇರೆ ಬೇರೆ ಎಂಬ ನಂಬಿಕೆ ಒಂದು ಭ್ರಮೆ, ಅಷ್ಟೇ. ಮಧ್ವಾಚಾರ್ಯರ 'ದ್ವೈತ' ಸಿಧ್ಧಾಂತದ ಪ್ರಕಾರ, ಆತ್ಮ, ಪರಮಾತ್ಮ ಬೇರೆ ಬೇರೆ. ಆತ್ಮ, ಪರಮಾತ್ಮನ ತುಣುಕೇ ಆದರೂ, ಶರೀರದಿಂದ ಪ್ರಕಟವಾಗಿ, ಬೇರೆ ಬೇರೆ ದುಸ್ತುಗಳಿಂದ ಗುರುತಿಸಲ್ಪಡುವುದರಿಂದ, ಅವು ಬೇರೆ ಬೇರೆಯಾಗಿ ಕಾಣಿಸುತ್ತವೆ. 'ಸಾವು', ಅನ್ನುವದು, ಈ ಆತ್ಮ, ಪರಮಾತ್ಮದಲ್ಲಿ ಲೀನವಾಗುವ ಒಂದು ಪ್ರಕ್ರಿಯೆ, ಅಂದರೆ ಮೂಲಕ್ಕೆ ಹೋಗಿ ಒಂದಾಗುವುದು!

ಒಟ್ಟಿನಲ್ಲಿ, 'ದ್ವಂದ್ವ', ಏಕರೂಪವಾಗುವದು; 'ದ್ವೈತ', 'ಅದ್ವೈತ'ವಾಗುವದು. ಈ ಆಸ್ಥೆಯ ಹಿನ್ನೆಲೆಯಲ್ಲಿ, 'ಹಯವದನ' ಕೊನೆಗೆ, 'ಹಯ'ವೇ ಆಗುತ್ತಾನೆ, ಆತನ ತಲೆಯಂತೆಯೇ ಶರೀರವಾಗುತ್ತದೆ; ದೇವದತ್ತ, ಕಪಿಲ, ಪದ್ಮಿನಿಗೆ ಕೂಡ, ಭೌತಿಕ ಪ್ರಪಂಚದ ಅಧಿನಿಯಮಗಳ ಅಸಾಧ್ಯತೆಯಲ್ಲಿ, ಶಾರೀರಿಕ ಮರಣವೇ, ಅಂತಿಮ ಉಪಾಯವಾಗುತ್ತದೆ!

ನಾಟಕದ ನಿಚ್ಚಳ 'ಸಂದೇಶ', ನಾಗಾಭರಣರ ಮನೋವೈಜ್ಞಾನಿಕ ಮರುವಿನ್ಯಾಸ – ನಿರ್ದೇಶನದ ಪರಿಪಕ್ವತೆಯಲ್ಲಿ, ಸುಂದರವಾಗಿ ಅನಾವರಣಗೊಳ್ಳುತ್ತದೆ.

ವರದಿ: **ಚಿಂತಾಮಣಿ ಸಭಾಹಿತ, ಬೋರಿವಲಿ, ಮುಂಬಯಿ**


## ಮೂರನೆಯ ದಿನ

ನಾಟಕ : **ಗೋಕುಲ ನಿರ್ಗಮನ**

ಮೇರು ಕೃತಿ: **ಪು. ತಿ. ನ**

ಸಂಗೀತ ಮತ್ತು ನಿರ್ದೇಶನ : **ಬಿ. ವಿ. ಕಾರಂತ**

ಮರು ವಿನ್ಯಾಸ: **ಡಾ. ಟಿ. ಎಸ್. ನಾಗಾಭರಣ**



ವಸುಧೇಯ ಕುಟುಂಬಕನಾದ, ಕಪಟ ನಾಟಕ ಸೂತ್ರಧಾರಿ, ಲೀಲಾಮಯ ಗೋಕುಲ ನಂದ ಕೃಷ್ಣ, ತನ್ನ ಯೌವ್ವನದ ಹೊಸ್ತಿಲಿನಲ್ಲಿ ಇಡೀ ಗೋಕುಲವನ್ನೇ ತನ್ನ ಸಹಜ ತುಂಟ ಪ್ರೀತಿಯ ಮೋಡಿಯಲ್ಲಿ ಸಿಲುಕಿಸಿ, ಎಲ್ಲರನ್ನೂ ಅವರವರ ವಯಸ್ಸು, ಮನಸ್ಸು, ಭಾವ, ಭಕುತಿಗೆ ಅನುಗುಣವಾಗಿ ಅವರವರ ರೀತಿಯಲ್ಲೇ ಮರುಳು ಮಾಡಿ, ಇಡೀ ಗೋಕುಲವೇ ಚೇತನ ತುಂಬಿ, ನಕ್ಕುನಲಿದು, ಆನಂದ ತುಂದಲಿತವಾಗಿರುವಂತೆ ಮಾಡಿರುತ್ತಾನೆ. ದ್ವಾಪರದ ತನ್ನ ಅವತಾರದ ಮುಂದಿನ ಲೀಲಾ ವಿನೋದವನ್ನು ಜಗತ್ತಿಗೆ ತೋರಿಸುವ ಸಲುವಾಗಿ ಅಕ್ರೂರನ ಮೂಲಕ ಮಾವ ಕಂಸನ ಆಹ್ವಾನದ ರೂಪದಲ್ಲಿ ಮಧುರೆಗೆ ಕರೆ ಬರುತ್ತದೆ. ಆ ಆಹ್ವಾನ ಇಡೀ ಗೋಕುಲ ಸಮುದಾಯಕ್ಕೇ ಬರಸಿಡಿಲಾಗುತ್ತದೆ.



ಅತ್ಯಂತ ವಿನೋದಾತ್ಮಕವಾಗಿ, ತನ್ನ ಜೀವದೊಲವಿನ ರಾಧೆಯನ್ನು ಮತ್ತು ಗೋಪಿಕೆಯರನ್ನು ಬಿಟ್ಟಗಲ ಲಾರದವನಂತೆ ಒದ್ದಾಡಿ, ಕೊನೆಗೆ ಕಂಸನ ಕರೆಯನ್ನು ಕರ್ತವ್ಯದ ಕರೆ ಎಂದು ಬಗೆದು ರಾಧೆಯನ್ನೂ, ತನ್ನ ಬಾಲ್ಯದ ನೆನಪಾದ ಗೋಕುಲವನ್ನೂ ಅತ್ಯಂತ ಸೂಚ್ಯವಾಗಿ ತನ್ನ ಮುಡಿಯಲ್ಲಿದ್ದ ನವಿಲುಗರಿ ಮತ್ತು ತನ್ನ ದೇಹದ ಅವಿಭಾಜ್ಯ ಅಂಗವೇನೋ ಕೊಳಲನ್ನೂ ತೊರೆದು ಕೃಷ್ಣ ತನ್ನ ಅವತಾರದ ಮುಂದಿನ ಘಟ್ಟ ಮಧುರೆಗೆ ಹೊರಡುತ್ತಾನೆ.

ಅಂದು ಹೋದ ಕೃಷ್ಣನನ್ನು, ಅವನ ಮುರಳಿ ನಾದವನು ರಾಧೆ ಮತ್ತು ಇಡೀ ಗೋಕುಲವೇ ಇಂದಿಗೂ ನಿರೀಕ್ಷಿಸುತ್ತಿರುವ ಪ್ರಸಂಗ ಅತ್ಯಂತ ರೋಚಕ, ಮನರಂಜನೆ ಶೈಲಿಯಲ್ಲಿ ಗೋಕುಲ ನಿರ್ಗಮನ ನಾಟಕದಲ್ಲಿ ರಂಗೇರುತ್ತದೆ. *(ಪುಟ 19ಕ್ಕೆ)*



# ಹಾಸ್ಯ ಲೇಖನ

✍ ನಂದಾ ಎಸ್. ರಾವ್

(Tarak Mehta ka Ulta Chasma'ನಿಂದ ಪ್ರೇರಿತವಾಗಿ ಬರೆದ ಕಥೆ)

ನಾನು ಶ್ರೀಮಾನ್ ಜಯಂತಿಲಾಲ್ ಭಾಯಿ ಪ್ರತಿದಿನದ ಅಭ್ಯಾಸದಂತೆ ಬೆಳಗ್ಗೆ ದಿನನಿತ್ಯ ಏಳುವ ಸಮಯಕ್ಕೆ ಸರಿಯಾಗಿ ಎದ್ದು ಸೂರ್ಯದರ್ಶನಕ್ಕೆಂದು ಬಾಲ್ಕನಿಯಲ್ಲಿ ನಿಂತಾಗ, ಆ ಭಾಸ್ಕರನು ಹಳದಿ ಕಿರಣದಿಂದ ಕಣ್ಣು ಕೋರೈಸುವಂತೆ ಉದಯಿಸುತ್ತಿದ್ದನು. ಆ ದಿನ ದಸರಾ ಹಬ್ಬದ ಪಾಡ್ಯ – ಅಂದರೆ ಮೊದಲ ದಿನ. ಇನ್ನು ಹತ್ತು ದಿನದ ಟ್ರಾಫಿಕ್ ಗೊಂದಲದ ಹೋರಾಟಕ್ಕೆ ಸಜ್ಜುಗೊಳ್ಳುವ ಯೋಧನಂತೆ ಹತ್ತು ನಿಮಿಷ ಮುಂಚೆಯೇ ಸಿದ್ಧನಾದೆನು. ಅದನ್ನು ಕಂಡ ನನ್ನ ಧರ್ಮಪತ್ನಿ ಅದೂ ಕೆಲಸಕ್ಕೆ ಹೋಗುವ ನವೀನ ನಾಗರಿಕತೆಯ ನಾರಿ ಸುಮ್ಮನಿರುತ್ತಾಳೆಯೇ? ಬೇಗ ಒಂದಿಷ್ಟು ನಿಂಬೆಹಣ್ಣು ತಂದುಕೊಡಿ, ಹಬ್ಬದ ಚಿತ್ರಾನ್ನ ಕಲೆಸಿಕೊಂಡು ಡಬ್ಬಿಗೆ ಹಾಕಬೇಕಾಗಿದೆ ಎಂದಳು. ಇನ್ನು ಹೀಗೆ ನಿರಾಕರಿಸುವುದು ಅದೂ ರಸ್ತೆ ದಾಟಿದರೆ ತರಕಾರಿ ಮಾರುವವಳ ಅಂಗಡಿ ಇರುವುದರಿಂದ ಸರಿ  ಎಂದು ತರಲು ಹೊರಟೆನು.

ಆಗ ತಾನೆ ಅಂಗಡಿ ತೆರೆದು ತರಕಾರಿಗಳನ್ನು ಹರಡುತ್ತಾ, ಒಂದು ಕಿವಿಯಲ್ಲಿ ಮೊಬೈಲ್ ಸಿಕ್ಕಿಸಿಕೊಂಡು ಅವಳ ತಂಗಿಯ ಕೂಡ ಬೆಳ್ಳಂಬೆಳಗ್ಗೆ ಯಾವ ಸೀರೆ ಉಡುವವಳಿದ್ದಾಳೆಂಬುದರ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಅವಳ ನಗುಮೊಗವನ್ನು ಒಂದು ಕ್ಷಣ ಹಾಗೇ ನೋಡುತ್ತಾ ನಿಂತೆ. ಅದನ್ನು ಕಂಡು ಅವಳು ಕಣ್ಣು ಸನ್ನೆಯಿಂದಲೇ ಏನು ಬೇಕೆಂದು ಕೇಳಿದಳು. ಅವರ ಮೊಬೈಲ್ ಸಂಭಾಷಣೆ ಜೊತೆಗೆ ರಸ್ತೆಯ ಟ್ರಾಫಿಕ್ ಅಬ್ಬರದಿಂದ ನಾನು ಕೇಳಿದ್ದು ಅವಳಿಗೆ ಕೇಳಿಸಲಿಲ್ಲ. ಎರಡನೆ ಸಲ ಕೇಳಿದಾಗ ನಾನು ಚಾಣಾಕ್ಷನಂತೆ ಅವಳ ಸೀರೆ ಬಣ್ಣ ತೋರಿಸಿ ನಿಂಬೆಹಣ್ಣಿನ ಕಡೆ ಕೈ ಚಾಚಿದೆ. ಎರಡು ಹಣ್ಣು ಕೈಗಿತ್ತು ಹತ್ತು ರೂ. ಎಂದು ಒಂದು ಕೈ ಬಿಡಿಸಿ ಎರಡು ಸಲ ಟಾಟಾ ಹೇಳಿದಳು.


ಮನೆಗೆ ಹಿಂತಿರುಗಿ ಡಬ್ಬಿನಲ್ಲಿ ಚಿತ್ರಾನ್ನ ತುಂಬಿಸಿಕೊಂಡು ಬಸ್ಸಿನಲ್ಲಿ ಹೇಗೋ ತೂರಿಕೊಂಡೆ. ಇದೇನು! ಬಸ್ಸಿನ ಭರ್ತಿ ದುಪ್ಪಟ್ಟ, ಸೆರಗುಗಳಿಂದ ತುಂಬಿದ 'ಮೋದಿ' ಭಕ್ತೆಯರು! ಎಲ್ಲಿಗೋ ಮೀಟೀಂಗ್‌ಗೆ ಹೊರಟಂತ್ತಿತ್ತು. ಇನ್ನು ಆಫೀಸಿನಲ್ಲಿ ಕಾಲಿಸಿರುತ್ತಿದ್ದಂತೆ ಎಲ್ಲೀಲೂ ಚೆಂಡು ಹೂವಿನ ತೋರಣ ದಸರಾ ಹಬ್ಬದ ಆಮಂತ್ರಣ ಕೊಟ್ಟಂತ್ತಿತ್ತು.

ಶೌಚಾಲಯಕ್ಕೆ ಹೋಗಿ ಚಿಕ್ಕ ಕೆಲಸ ಮೂಗಿಸಿಕೊಂಡು ಕೂತುಕೊಳ್ಳೋಣವೆಂದು ಹೋದರೆ ಮೂತ್ರವು ಏನೋ ಜಾಸ್ತಿ ಹಳದಿಯಾಗಿರುವಂತೆ ಕಂಡಿತು. ಮುಂದೆ ಬಂದು ಕೂತರೇ ಬರೀ ಹಳದಿ ಫೈಲ್ ಗಳೇ ಜೋಡಿಸಿಟ್ಟಂತ್ತಿತ್ತು. ಇನ್ನು ಆಫೀಸಿನಲ್ಲಿ ಕೆಲಸ ಮಾಡುವ ಭಗಿನಿಯರಾದ ಗುಮಾಸ್ತೆ, ಸೆಕ್ರೆಟರಿ, ಅಕೌಂಟೆಂಟ್, ಕೊನೆಗೆ ಕಾಫಿ ಟೀ ಸಪ್ಲೈ ಮಾಡುವ ಶಕುಂತಳೆಯೂ ಹಳದಿಯಾಗಿ ಕಾಣುತ್ತಿದ್ದರು. ಒಬ್ಬರದು ಕುರ್ತಿಯಾದರೆ ಇನ್ನೊಬ್ಬಳದು ತಲೆಯ ಕ್ಲಿಪ್, ಮತ್ತೊಬ್ಬಳದು ಬ್ಯಾಗ್ ಅಥವಾ ಚಪ್ಪಲಿ, ಅಂತೂ "ಸರ್ವಂ ಹರ್ದ್ರಾಮಯಂ ಆಗಿತ್ತು. ಇನ್ನು ತಿಂಡಿ ಆರ್ಡರ್ ಮಾಡೋಣವೆಂದು 'ಮೆನು' ಕೇಳಿದೆನು. ಅದೂ ಜಿಲೇಬಿ, ಡೋಕಲಾ, ಪಾಪಡಾ, ಪೈನಾಪಲ್ ಕೇಸರಿ ಅಂತ ಹೇಳಿದನು. ಯಾರೋ ದೇಹಸ್ಥಿತಿ ಸರಿಯಿಲ್ಲವೆಂದೆಣಿಸಿ ಪರಿಸ್ಥಿತಿ ವಿರೋಪಗೊಳ್ಳುವ ಮುಂಚೆ ಒಂದರ್ಧ ದಿನ ರಜ ಹಾಕಿ ಡಾಕ್ಟರ್ ಹತ್ತಿರ ಹೋಗಲು ಯೋಚಿಸಿದೆನು. ಅದಕ್ಕಾಗಿ ಪರವಾನಗಿ ಪಡೆಯಲು ನನ್ನ 'ಬಾಸಿನಿ' (ಲೇಡಿ ಬಾಸ್) ಹತ್ತಿರ ಹೋದೆನು. ಸಂತೋಷದಲ್ಲಿ ನಗುತ್ತಾ ಸ್ವಾಗತಿಸಿದಳು. ನಾನು ಅರ್ಧದಿನ ರಜ ಬೇಕೆಂದಾಗ ಕಾರಣ ಏನೆಂದಳು. ನಾನು ಅಳುಕುತ್ತಲೇ ನನಗೆ ಕಾಮಾಲೆ ರೋಗ ಶುರುವಾದಂತಿದೆ ಎಂದೆ ಅವಳು ಕೂಡಲೇ ಪಶ್ಚಾತ್ತಾಪದಿಂದ ರಜ ಮಂಜೂರು ಮಾಡಿದಳು.

ಡಾಕ್ಟರರಲ್ಲಿಗೆ ನಡೆದೇ ಹೋದೆ. ಅವರು ಚೆನ್ನಾಗಿ ತಪಾಯಿಸಿ 'ಕಾಮಾಲೆ' ಅಂತದ್ದೇನೂ ಕಾಣೋದಿಲ್ಲ. ಏನೋ ಪಿತ್ತ ಕೆರಳಿರಬೇಕೆಂದು ಮಾತ್ರೆ ಗೀಚಿಕೊಟ್ಟರು. ಮನಸ್ಸಿಗೆ ಒಂಥರ ಶಾಂತಿ ಎನ್ನಿಸಿ ಒಂದು ಕೂಲ್ ಡ್ರಿಂಕ್ಸ್ ಕುಡಿಯೋಣವೆಂದು ಎದುರಿಗಿದ್ದ 'ಮಾಲ್' ಒಳಗೆ ನುಗ್ಗಿದೆ. ಕೊಡಪ್ಪ ಯಾವುದಾದರೂ 'ತಂಡಾ ಪಾನೀಯ' ವೆಂದರೆ ಮಂಗೋಲಾ, ಮ್ಯಾಂಗೋ, ಫ್ರೂಟಿ ಮತ್ತು ಆಮನೇಡ್ ಇದೆ ಎಂದನು. ಅದನ್ನೇ ಕುಡಿದ ಮೇಲೆ ನೆತ್ತಿ ತಣ್ಣಗಾಯ್ತು. ಎದುರಿಗೆ ಮಾಲ್ ನಲ್ಲಿ 'ಮೆಗಾ ಸೀರೆ ಸೇಲ್' ಆಕರ್ಷಿಸಿತು. ದಸರಾ ಹಬ್ಬಕ್ಕೆ ಹೆಂಡತಿ ಹೇಗೂ ಸೀರೆ ಕೇಳುತ್ತಿದ್ದಾಳೆ ತೆಗೆದುಕೊಳ್ಳೋಣ, ಡಾಕ್ಟರ್ ಬಿಲ್ ತೆರುವುದು ಉಳಿಯಿತಲ್ಲಾ ಎಂದುಕೊಂಡು ಅಂಗಡಿಯೊಳಗೆ ಕಾಲಿರಿಸಿದೆನು. ಅಂಗಡಿ ತುಂಬಾ ಹಳದಿ ಬಣ್ಣದ ಸೀರೆಗಳ ರಾಶಿ. ಹೆಂಗಸರೆಲ್ಲಾ ಅದನ್ನೇ ಖರೀದಿಸುತ್ತಿದ್ದಂತಿತ್ತು. ಬೇರೆ ಬಣ್ಣ ತೋರಿಸಪ್ಪ ಎಂದು ಕೇಳಿದಕ್ಕೆ ಅವನಿಂದ ಗೊತ್ತಾಯಿತು ಈ ದಿನ ಹಳದಿ ಬಣ್ಣದ ದಿನ' ವೆಂದು ಅಂದರೆ ಆಗ ನನಗೆ ಹೊಳೆಯಿತು. ಏಕೆ ಕಸ ಗುಡಿಸುವ ಹೆಂಗಳೆಯಿಂದ ನನ್ನ ಬಾಸಿನಿ ಏಕೆ ಹಳದಿ ಬಣ್ಣದಲ್ಲಿ ಕಂಡರೆಂದು. ಸರಿ! ನನ್ನ ಪತ್ನಿಗೂ ನನ್ನ ತಿಳುವಳಿಕೆಯನ್ನು ತೋರ್ಪಡಿಸುವ ಖುಷಿಯಿಂದ ಒಂದು ಸೀರೆ ತೆಗೆದುಕೊಳ್ಳೋಣವೆಂದು ಕೊಂಡಾಗ ಎಲ್ಲೋ ಓದಿದ ಪಂಕ್ತಿ "I want an yellow saree, not a lemon yellow and not even the taxi yellow but a little lighter shade than that not the dirty yellow" - ಅಂತೆಲ್ಲಾ ಜ್ಞಾಪಿಸಿಕೊಂಡು ಕೊನೆಗೂ ಒಂದು ಅರಿಸಿದೆ. ಸೀರೆ ಪ್ಯಾಕೆಟ್ ನೋಡಿದಾಗ ಅವಳ ಮುಖ ಸೂರ್ಯಕಾಂತಿಯಂತೆ ಅರಳುವುದನ್ನು ನೆನಸಿಕೊಳ್ಳುತ್ತಾ ಮನೆ ತಲುಪುವ ಹೊತ್ತಿಗೆ ಸಂಜೆಯೇ ಆಗಿತ್ತು. ಹಳದಿ ಹೂವಿನ ನೈಟಿಯಲ್ಲಿ ಎದುರುಗೊಂಡ ನನ್ನ ನಲ್ಲೆ ನಗುಮೊಗದಲ್ಲೇ ಸೀರೆ ಪ್ಯಾಕೆಟ್ ತೆಗೆದು 'ಅಯ್ಯೋ! ಇದೇನ್ರಿ ಹಳದಿ ಸೀರೆ ತಂದಿದ್ದೀರಿ? ನಾಳೆ ನಾವೆಲ್ಲಾ 'ಹಸಿರು' ಬಣ್ಣದ್ದು ಉಡಬೇಕಾಗಿದೆ ಎಂದಾಗ ನಾನು ಆ ನವದುರ್ಗೆಯನ್ನು ನಾನಾ ಬಣ್ಣದಲ್ಲಿ ನೆನೆಸಿಕೊಳ್ಳುತ್ತಾ ಕೈ ಮುಗಿದು ಕುಸಿದು ಕುಳಿತೆ.

●

# ಕರ್ನಾಟಕ ಏಕೀಕರಣದ ಇತಿಹಾಸ; ಹಾಗೂ ಬಾಕೀಕರಣದ ವರ್ತಮಾನ!



✍ ಕುಂದೂರು ಅಶೋಕ್

ಕರ್ನಾಟಕವೆಂಬುದು ಭೌಗೋಳಿಕವಾಗಿ ಹುರುಳಿ ಬೀಜದ ಆಕಾರ, ಭಾವನಾತ್ಮಕವಾಗಿ ಯೋಚಿಸುವುದಾದರೆ, ಭಾರತಾಂಬೆಯ ಮಡಿಲಲ್ಲಿ ಭ್ರೂಣಾವಸ್ಥೆಯ ಆಕಾರದಲ್ಲಿ ನಮಗೆ ಗೋಚರಿಸುತ್ತದೆ! ಭಾರತದ ಭೂಪಟದಲ್ಲಿ ಭುವನೇಶ್ವರಿಯಂತಹ ಮಗಳು ಕನ್ನಡದ ಅಸ್ಮಿತೆಯನ್ನು ತನ್ನದಾಗಿಸಿಕೊಳ್ಳಲು ಬಹಳವೇ ಕಷ್ಟಪಟ್ಟಿದೆ ಎಂದರೆ ತಪ್ಪಾಗಲಾರದು.

ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳ ರಚನೆಯ ಕೂಗು ಬ್ರಿಟಿಷ್ ಆಡಳಿತದಲ್ಲೇ ಶುರುವಾಗಿತ್ತು. ಕನ್ನಡ ನಾಡನ್ನು ಮೌರ್ಯರಿಂದ ಮೈಸೂರಿನ ಒಡೆಯರ್‌ವರೆಗೆ ಆಳಿರುವ ಕುರುಹುಗಳು ಮತ್ತು ಇತಿಹಾಸಗಳಿವೆ. ಇಂತಹ ನಾಡು 19ನೇ ಶತಮಾನದಲ್ಲಿ 22 ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿ, ಇಂತಹ ಕನ್ನಡಿಗರ ನೋವು, ಯಾತನೆಗಳನ್ನು ಪರಿಹರಿಸಿ ಒಂದುಗೂಡಿಸುವುದಕ್ಕಾಗಿ ನಡೆದಿದ್ದ ಹೋರಾಟವೇ 'ಏಕೀಕರಣದ ಚಳುವಳಿ'.

ಬ್ರಿಟಿಷ್ ಆಳ್ವಿಕೆಯಲ್ಲಿ ಬಂಗಾಳ ಪ್ರೆಸಿಡೆನ್ಸಿಯಲ್ಲಿ ಒರಿಸ್ಸಾ, ಬಿಹಾರ ಹಾಗೂ ಬಂಗಾಳಗಳು ಸೇರಿ ಬಂಗಾಳ ಪ್ರಾಂತ್ಯವಾಗಿತ್ತು. ಹಿಂದಿ ಮಾತನಾಡುವ ಬಿಹಾರಿಗಳು ಒಂದು ಪ್ರತ್ಯೇಕ ಸಮುದಾಯ ವಾಗಿದ್ದರು. ಆದ್ದರಿಂದ ಅವರಿಗೆ ಹಿಂದಿ ಭಾಷೆ ಮಾತನಾಡುವ ಪ್ರತ್ಯೇಕ ಬಿಹಾರ ಪ್ರಾಂತ್ಯ ರಚಿಸಿಕೊಡಬೇಕೆಂದು ಒತ್ತಾಯಿಸಿ 1896 ರಲ್ಲಿ ಶ್ರೀ ಮಹೇಶ್ ನಾರಾಯಣ್ ಎಂಬುವವರು ಚಳುವಳಿ ಪ್ರಾರಂಭಿಸಿದ್ದರು. 1905 ಲಾರ್ಡ್ ಕರ್ಜನ್ ಮಾಡಿದ ಬಂಗಾಳ ವಿಭಜನೆಯು ಭಾಷಾವಾರು ಪ್ರಾಂತ್ಯದ ಪ್ರಶ್ನೆಯನ್ನು ದೇಶವ್ಯಾಪ್ತಿ ಸಮಸ್ಯೆಯನ್ನಾಗಿ ಮಾಡಿಬಿಟ್ಟಿತು. ಬ್ರಿಟಿಷ್ ಸರ್ಕಾರವು ಹಾರ್ಡಿಂಗ್‌ಡಿಸ್‌ಪ್ಯಾಚ್‌ನ ಸಲಹೆಗನುಗುಣವಾಗಿ 1912 ರಲ್ಲಿ ಬಂಗಾಳ ವಿಭಜನೆಯನ್ನು ರದ್ದುಪಡಿಸಿ ಭಾಷಾವಾರು ನೀತಿಯ ಆಧಾರದ ಮೇಲೆ ಬಿಹಾರ ಹಾಗೂ ಒರಿಸ್ಸಾ ರಾಜ್ಯಗಳನ್ನು ನಿರ್ಮಿಸಿತು.

ಇದೇ ಎಳೆಯನ್ನು ಹಿಡಿದುಕೊಂಡು ಭಾಷಾವಾರು ಪ್ರಾಂತ್ಯ ರಚನೆಯಾಗಬೇಕೆಂದು ಪೂಜ್ಯ ದೊಡ್ಡಪ್ಪಅಪ್ಪ, ಸ್ವಾಮಿ ರಮಾನಂದತೀರ್ಥ, ಎಸ್. ನಿಜಲಿಂಗಪ್ಪ, ಜಿನರಾಜ ಹೆಗಡೆ, ಜಯದೇವಿತಾಯಿ ಲಿಗಾಡೆ, ಎಸ್.ಆರ್.ಕಂಠಿ, ಸಿದ್ಧಪ್ಪ ಕಂಬಳಿ ಮುಂತಾದ ಸಾಹಿತಿ, ಕವಿಗಳು ಹಾಗೂ ಸಾಮಾಜಿಕ ರಾಜಕೀಯ ಕಾರ್ಯಕರ್ತರು ಹೈದರಾಬಾದ್ ಸಂಸ್ಥಾನವನ್ನು ಭಾರತದೊಂದಿಗೆ ವಿಲೀನಗೊಳಿಸುವುದರ ಜತೆಗೆ, ಅಲ್ಲಿನ ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡಲು ಮುಂದಾದರು. 1950 ರಲ್ಲಿ ಕರ್ನಾಟಕ ಕಾಂಗ್ರೆಸ್ ಸಮಿತಿಯು ಗುಲ್ಬರ್ಗಾದಲ್ಲಿ ಸಭೆ ಕರೆದು ಕನ್ನಡ ಮಾತನಾಡುವವರಿಗಾಗಿ ಪ್ರತ್ಯೇಕ ಪ್ರಾಂತ್ಯ ರಚನೆ ಮಾಡಲು ಹೈ.ಕರ್ನಾಟಕ ಪ್ರದೇಶದಲ್ಲಿ ಸಂಚರಿಸಿ ತಾಲ್ಲೂಕು ಮಟ್ಟದಲ್ಲಿ ಕರ್ನಾಟಕ ಏಕೀಕರಣ ಸಮಿತಿಗಳನ್ನು ರಚಿಸಿ ಏಕೀಕರಣಕ್ಕೆ ಜನ ಬೆಂಬಲ ಸಿಗುವಂತೆ ಮಾಡಿದರು. 1953 ರಲ್ಲಿ ಅಖಂಡ ಕರ್ನಾಟಕ ನಿರ್ಮಾಣ ಸಮಿತಿಯು 'ಕರ್ನಾಟಕ ಏಕೀಕರಣ' ಚಳುವಳಿಯನ್ನು ಚುರುಕುಗೊಳಿಸಲು; ಎಸ್. ನಿಜಲಿಂಗಪ್ಪ, ಸಮಿತಿಯ ಅಧ್ಯಕ್ಷರಾದ ಶಿವಮೂರ್ತಿಸ್ವಾಮಿ, ಅಳವಂಡಿ, ಗುಲ್ಬರ್ಗಾ ಲೋಕಸಭಾ ಅಂದಿನ ಸದಸ್ಯರು ನೆಹರೂ ಅವರನ್ನು ಭೇಟಿ ಮಾಡಿ, ಕರ್ನಾಟಕದ ಪ್ರಾಂತ್ಯ ರಚನೆಯ ಗಂಭೀರತೆಯನ್ನು ವಿವರಿಸಿದರು.

ಈ ನಡುವೆ ವಿಶಾಲಾಂಧ್ರ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಿ, ಅಸುನೀಗಿದನು. ಇದರ ಪರಿಣಾಮವಾಗಿ ಆಂದ್ರ ರಾಜ್ಯ ರಚನೆ 1953 ರಲ್ಲಿ ರಚನೆಯಾಯಿತು. ಸನ್ನಿವೇಶದ ಗಂಭೀರತೆಯನ್ನು ಅರಿತ ಕೇಂದ್ರ ಗೃಹ ಸಚಿವಾಲಯವು 29–12–1953 ರಲ್ಲಿ ಫಜಲ್ ಅಲಿ ಆಯೋಗವೆಂದು ಪ್ರಸಿದ್ಧವಾಗಿರುವ ರಾಜ್ಯ ಪುನರ್ ವಿಂಗಡಣಾ ಆಯೋಗವನ್ನು ನೇಮಿಸಿತು. ಕೆ.ಎಂ. ಫಣಿಕ್ಕರ್ ಹಾಗೂ ಎಚ್.ಎನ್. ಕುಂಜ್ರು ಅವರುಗಳು ಆಯೋಗದ ಸದಸ್ಯರಾಗಿದ್ದರು.ಈ ಆಯೋಗದ ಪ್ರಕಾರ ಯಾವ ಪ್ರದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಒಂದು ಭಾಷೆಯನ್ನಾಡುತ್ತಾರೋ ಆ ಪ್ರದೇಶವನ್ನು ಆ ಭಾಷೆಯಾಡುವ ಪ್ರದೇಶದ ಜೊತೆಗೆ ವಿಲೀನಗೊಳಿಸಬೇಕಾಗಿತ್ತು. ಗಡಿಗಳ ಮರುಹಂಚಿಕೆಯಲ್ಲಿ ಕಂದಾಯ ವಲಯದ ಮೂಲಮಾನ ನಿಯಮದ ಪ್ರಕಾರ ಬೆಳಗಾವಿಯನ್ನು ಕರ್ನಾಟಕಕ್ಕೆ ನೀಡಲಾಯಿತು. ತಾಲ್ಲೂಕು ಮೂಲಮಾನ ಪ್ರಕಾರ ಅಂದರೆ ಬಹುಸಂಖ್ಯಾತ ಜನರು ಕನ್ನಡೇತರಾಗಿದ್ದುದರಿಂದ ಆಲಂಪುರ, ಆಲೂರು, ಅಧೋನಿ, ತಾಂಡೂರು, ಸೊಲ್ಲಾಪುರ, ರಾಯದುರ್ಗ, ಕಲ್ಯಾಣದುರ್ಗಗಳನ್ನು ಕನ್ನಡನಾಡು ಕಳೆದುಕೊಳ್ಳ ಬೇಕಾಯಿತು. ದುರಂತವೆಂದರೆ, ಕಾಸರಗೋಡು, ಜತ್ತ, ಅಕ್ಕಲಕೋಟೆಗಳಲ್ಲಿ ಕನ್ನಡಿಗರು ಬಹುಸಂಖ್ಯಾತರಿದ್ದರೂ ನಾವು ಕಳೆದುಕೊಳ್ಳಬೇಕಾಯಿತು.

ಹೀಗೆ ನವೆಂಬರ್ 1, 1956 ರಂದು ಅಖಂಡ ಕರ್ನಾಟಕ ರಚನೆಯಾಗಿ ಹೈದ್ರಾಬಾದ್ ಕರ್ನಾಟಕ ಮೈಸೂರು ಪ್ರಾಂತ್ಯಕ್ಕೆ ಸೇರುವುದರ ಮದೂಲಕ ಹೊಸ ರಾಜ್ಯ ರಚನೆಯಾಯಿತು. ಇದರ ಮೂಲಕ ಹರಿದು ಹಂಚಿ ಹೋಗಿರುವ ಕನ್ನಡಿಗರು ಅಖಂಡತೆಯನ್ನು ಹೊಂದಿ ಮೈಸೂರು ರಾಜ್ಯ ಎಂದು ನಾಮಕರಣ ಪಡೆಯಿತು. ನವೆಂಬರ್ 1, 1973 ರಂದು ಅಂದಿನ ಮುಖ್ಯ ಮಂತ್ರಿಯಾದ ಶ್ರೀ ಡಿ. ದೇವರಾಜ

ಅರಸು ಅವರು ನಮ್ಮ ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡಿದರು.

ಕರ್ನಾಟಕ ಭೂಪಟದ ದೃಷ್ಟಿಯಿಂದ ರಾಜಕೀಯ ಏಕೀಕರಣವೇನೋ ಆಯಿತು. ಬಾಕೀಕರಣ ಹಾಗೇ ಉಳಿಯಿತಲ್ಲ! ಇದರ ಕುರಿತು ಸರ್ಕಾರವಾಗಲಿ, ಕನ್ನಡಪರ ಸಂಘಟನೆಗಳಾಗಲಿ ನಿಜವಾದ ಇಚ್ಛಾಶಕ್ತಿಯನ್ನು ತೋರಿ ಕನ್ನಡದ ನೆಲ, ಜಲ, ಜನ ಹಾಗೂ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಲು ಮುಂದಾಗದೆ ಇರುವುದು ದುರಂತದ ಸಂಗತಿ. ಹಾಗೆ ಕನ್ನಡ ನಾಡಿಗೆ ಬಾಕೀಕರಣದ ಸಂಗತಿಗಳು ಯಾವುವು ಎಂದರೆ?

- ಕಾವೇರಿ ನದಿಯ ನೀರನ್ನು ಸಮರ್ಥವಾಗಿ ಬಳಸಿಕೊಳ್ಳದೆ ಇರುವುದು (ಮೇಕೆದಾಟು ಯೋಜನೆ ಅನುಷ್ಠಾನ) ಮಧ್ಯೆ ಕರ್ನಾಟಕದ ನೀರಿನ ಕೊರತೆ ನೀಗಿಸುವ ಮಹದಾಯಿ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ)
- ಹಿಂದಿ ಹೇರಿಕೆಯನ್ನು ಸಹಿಸಿಕೊಂಡಿರುವುದು, ದ್ವಿಭಾಷಾ ನೀತಿ ಜಾರಿಗೆ ತರದೇ ಇರುವುದು.
- ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕನ್ನಡ ಭಾಷೆಯನ್ನು ಶಿಕ್ಷಣ ಮಾಧ್ಯಮ ಮಾಡದೇ ಇರುವುದು.
- ಮಹರಾಷ್ಟ್ರ, ಆಂಧ್ರ, ಕೇರಳ ಹಾಗೂ ತಮಿಳುನಾಡಿನಲ್ಲಿ ಉಳಿದಿರುವ ಕನ್ನಡ ಮಾತನಾಡುವ ಪ್ರದೇಶ, ಜನರನ್ನು ಕರ್ನಾಟಕದ ತೆಕ್ಕೆಗೆ ತೆಗೆದುಕೊಳ್ಳದೆ ಇರುವುದು.
- ಕರ್ನಾಟಕದ ರಾಜಧಾನಿ ಬೆಂಗಳೂರನ್ನು ವಿದೇಶಿ ಕಂಪೆನಿಗಳ ವಸಾಹತು ಮಾಡಿ, ಭಾಷೆ ಮತ್ತು ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದು.
- ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳು ಮುಚ್ಚಿಕೊಂಡು ಮೂಲೆಗುಂಪಾಗಿರುವುದನ್ನು ತಡೆದು ಪುನರುಜ್ಜೀವನಗೊಳಿಸುವುದು.

ಇನ್ನು ಹಲವಾರು ಕನ್ನಡ ಪರವಾದ ಬಾಕೀಕರಣಗಳು ಹಾಗೆ ಉಳಿದಿವೆ. 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎನ್ನುವುದು ಇನ್ನೂ ಸತ್ಯವಾಗಿದೆ, ನಿರಂತರತೆಯನ್ನು ಕಾದುಕೊಂಡಿದೆ. 'ಕನ್ನಡಕ್ಕಾಗಿ ಹೋರಾಡು ಕನ್ನಡದ ಕಂದ' ಎನ್ನುವುದು ನಿತ್ಯ ಸತ್ಯವಾಗಿದೆ.

'ಕನ್ನಡವ ಕಾಪಾಡು ಕನ್ನಡಿಗರಿಂದ!' ಎಂಬುದು ಜ್ವಲಂತ ಸಮಸ್ಯೆಯಾಗಿದೆ. ವಾಸ್ತವ ಸಂಗತಿಯಾಗಿದೆ. ಕರ್ನಾಟಕ ಏಕೀಕರಣವೇನೋ ಆಯಿತು. ಆದರೆ, ಅನೇಕ ಬಾಕೀಕರಣದ ತೀರುವಳಿಯಾಗುವುದಿದೆ. ಅದೆಲ್ಲವೂ ಆದರೆ, ಸಮೃದ್ಧ ಹಾಗೂ ಸ್ವಾಭಿಮಾನಿ ಕರ್ನಾಟಕ ನಮ್ಮದಾಗಿ ಕರ್ನಾಟಕ, ಕನ್ನಡ ಹಾಗೂ ಕನ್ನಡಿಗರು ಭಾವನಾತ್ಮಕ ಏಕೀಕರಣವಾಗಬೇಕಿದೆ ವರ್ತಮಾನದಲ್ಲಿ! ○

## CONDOLENCE



**Shri G. V. Rao**

We are deeply saddened by the news of the passing of our beloved Mr. G V Rao. As Vice President during our Diamond Jubilee and also a dedicated Vice President of NKES, he was truly one of our greatest inspirations. We pray to the Almighty to grant his family the strength, courage, and peace to bear this irreparable loss. His memory will continue to inspire us.

## ಶ್ರದ್ಧಾಂಜಲಿ



ಅಸೋಸಿಯೇಶನ್‌ನ ಆಜೀವ ಸದಸ್ಯರಾಗಿದ್ದ ಶ್ರೀಯುತ ಎಚ್. ಆರ್. ಲಕ್ಷ್ಮೀವೆಂಕಟೇಶ್ ಅವರು ಅಕ್ಟೋಬರ್ 30ರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ .

ಶ್ರೀಯುತರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಗ್ರಾಮದವರು. ಕನ್ನಡದ ಖ್ಯಾತ ಕವಿ ಎಚ್. ಎಸ್. ವೆಂಕಟೇಶ್ ಅವರ ಸಹಪಾಠಿಗಳಾಗಿದ್ದರೆಂದೂ, ಅವರ ಪರಮಾಪ್ತ ಮಿತ್ರರೆಂದೂ ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು. ಶ್ರೀಯುತರು ತಮ್ಮ ಓದು ಮುಗಿಸಿ ನೌಕರಿ ನಿಮಿತ್ತ ಮುಂಬಯಿಗೆ ಬಂದವರು. ಮಾಟುಂಗಾದಲ್ಲಿದ್ದ ಕೇಂದ್ರ ಹತ್ತಿ ಸಂಶೋಧನಾ ಸಂಸ್ಥೆಯಲ್ಲಿ 30 ವರ್ಷಕ್ಕೂ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ನಿವೃತ್ತರಾದ ನಂತರವೂ ಅವರು ಮುಂಬಯಿಯಲ್ಲೇ ಉಳಿದಿದ್ದರು. ಇತ್ತೀಚೆಗೆ ಅನಾರೋಗ್ಯ ಹಾಗೂ ವಾಸವಿದ್ದ ಮನೆ ಪುನರ್ನಿರ್ಮಾಣದಿಂದಾಗಿ ಮೈಸೂರಿಗೆ ಬಂದು ನೆಲೆಸಿದ್ದರು.

ಶ್ರೀಯುತರ ಪತ್ನಿ ಸರೋಜಾ ಕೂಡ ಅಸೋಸಿಯೇಶನ್‌ನ ಸದಸ್ಯರಾಗಿರುತ್ತಾರೆ.

ಶ್ರೀಯುತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಬಿಟ್ಟು ಅಗಲಿದ್ದಾರೆ. ಆತ್ಮಕ್ಕೆ ಸದ್ಗತಿ ದೊರಕಲಿ ಎಂದು....

# ಇಂದಿನ ಸಮಾಜ ಎತ್ತ ಸಾಗುತ್ತಿದೆ!

✍ ಸವಿತಾ ರಾವ್

ಅಂದು ಭಾನುವಾರ. ಎಂದಿನಂತೆ ಶಾಂತಿಯಿಂದ ಚಹಾ ಗುಟುಕರಿಸುತ್ತ ಆ ದಿನದ ವರ್ತಮಾನ ಪತ್ರವನ್ನು ನೋಡುತ್ತ ವರಾಂಡದಲ್ಲಿ ಕುಳಿತಿದ್ದ ನನಗೆ ಲಿಂಗನ ಆತಮ್ಮದ ಕೂಗು ನನ್ನನ್ನು ವಾಸ್ತವಕ್ಕೆ ಎಳೆಯಿತು. ಲಿಂಗನಿಗೆ ಯಾರೋ ಅವಿವೇಕಿಗಳು ಅವನ ಬೆಳೆ ನಾಶ ಮಾಡಿದುದ್ದಲ್ಲದೆ ಅವನಿಗೂ ಹಿಂಸೆ ಕೊಟ್ಟಿದ್ದರು ಲಿಂಗನ ಮೈಯಲ್ಲಿ ಗಾಯವಾಗಿ ರಕ್ತ ಸೋರುತ್ತಿತ್ತು. ಅವನು ಕಂಗಾಲಾಗಿದ್ದ. ಅವನನ್ನು ಸಮಾಧಾನಿಸಿ ಗಾಯಗಳಿಗೆ ಔಷಧ ಹಚ್ಚುತ್ತಲೇ ನನ್ನವಳು ಕಾಫಿ ತಿಂಡಿಯೊಡನೆ ಉಪಚರಿಸಿದಳು. ನಾನು ಅವನಿಗೊಂದು ಮಾತ್ರೆ ಕೊಟ್ಟು ಅಲ್ಲೇ ಜಗುಲಿಯಲ್ಲಿ ಮಲಗಿಸಿದೆ.

ನನ್ನ ಗಮನ ಲಿಂಗನ ಕಡೆ ಹರಿಯಿತು. ಯಾರೋ ಗತಿ ಇಲ್ಲದ ಚಿಕ್ಕ ಪ್ರಾಯದ ಲಿಂಗನನ್ನು ನಮ್ಮ ಮನೆಯಲ್ಲೇ ಅವನಿಂದಾಗುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರಾಮಾಣಿಕನಾಗಿದ್ದ. ಓದು ಅವನಿಗೆ ಹತ್ತದೇ ಮನೆಕೆಲಸಕ್ಕೇ ಸೀಮಿತನಾಗಿದ್ದ. ಪ್ರಾಪ್ತ ವಯಸ್ಕನಾದಾಗ ನಮ್ಮ ಮನೆಯಲ್ಲೇ ಕೆಲಸಕ್ಕಿದ್ದ ಸಾವಿತ್ರಿಯ ಮಗಳು ಚಂದ್ರಿಯೊಡನೆ ಅವನ ಮದುವೆಯನ್ನೂ ಮಾಡಿ ನಮ್ಮ ತೋಟದಲ್ಲೇ ಅವನಿಗೊಂದು ಚಿಕ್ಕ ಮನೆ ಮಾಡಿ ಕೊಟ್ಟಿದ್ದೆವು. ಅವನ ಚಿಕ್ಕ ಚೊಕ್ಕ ಸಂಸಾರವು ಸುಖವಾಗಿ ಮುಂದುವರೆಯುತ್ತಿತ್ತು. ನಂತರ ಸರಕಾರದಿಂದ ಸಿಗುವ ಸವಲತ್ತಿನಿಂದ ವನ ಹೆಸರಿಗೊಂದು ಚಿಕ್ಕ ಜಮೀನನ್ನೂ ಮಂಜೂರಾಗಿಸಿದೆ. ಅವನೂ ಕಷ್ಟಪಟ್ಟು ದುಡಿದು ಅದನ್ನು ಊರ್ಜಿತಗೊಳಿಸಿದುದಲ್ಲದೆ ನಮ್ಮ ಮನೆಯಲ್ಲೂ ಅಗತ್ಯ ಬಿದ್ದಾಗ ಇಬ್ಬರೂ ಒಂದು ಸಹಕರಿಸುತ್ತಿದ್ದರು. ಇಂತಹ ನಿರುಪದ್ರವಿ ಲಿಂಗನಿಗೆ ಯಾರೋ ತಿಳಿಗೇಡಿಗಳು ಬೆಳೆ ನಾಶಮಾಡಿದುದಲ್ಲದೇ ಅವನನ್ನು ಹೊಡೆದು ಈ ಸ್ಥಿತಿಗೆ ತಂದಿದ್ದರು.

ಲಿಂಗನ ಅವಸ್ಥೆ ನೋಡುತ್ತಿದ್ದಂತೆ ನನಗೆ ಈಗಿನ ಜನಾಂಗ ಏಕೆ ಅನ್ಯಾಯ ಅನಾಚಾರಗಳ ದಾಸರಾಗುತ್ತಿದ್ದಾರೆ ಎಂಬ ತಳಮಳ ತಡೆಯಲಾರದಾಯಿತು. ಆದರೆ ಒಂದು ಯಾರನ್ನೂ ದೂಷಿಸಲು ಸಾಧ್ಯ? ಈಗಿನ ವಾತಾವರಣವೇ ಇದಕ್ಕೆಲ್ಲ ಕಾರಣವೆನ್ನಬಹುದೇ? ಇಲ್ಲ. ಏಕೆಂದರೆ ಎಲ್ಲರೂ ಇಂತಹವರೇ ಇರುವರೇ? ಸದಾಚಾರಿಗಳೂ ಇವರಲ್ಲಿ ಇಲ್ಲವೇ? ಊಟಕ್ಕೆ ಉಪ್ಪಿನಕಾಯಿ ಇದ್ದಂತೆ ಇಂತಹವರು ಇದ್ದೇ ಇರುವರು. ಅವರು ನಮ್ಮಷ್ಟಕ್ಕೇ ನಾವಿರಲೂ ಬಿಡರು. ಅವರೂ ಸುಧಾರಿಸರು. ಹೀಗೆ ಯೋಚಿಸುತ್ತಿದ್ದಂತೆಯೇ ನಮ್ಮಲ್ಲಿ ಮನೆಯವಳಂತೆಯೇ ಇದ್ದ ಸುಶೀಲ "ಏನು ಅಯ್ಯನವರು ಗಾಢ ಚಿಂತೆಯಲ್ಲಿದ್ದಂತಿದೆ ಎಂದು ಎಚ್ಚರಿಸಿದಳು.

ಲಿಂಗನಂತೆ ಇವಳದೂ ಒಂದು ಕಥೆ– ನನ್ನವಳಿಗೂ ಇವಳಿಗೂ ಗಳಸ್ಯ ಕಂಠಸ್ಯ. ಇವಲೀಗೆ ಏನು ಮಾಡಬೇಕಿದ್ದರೂ ಸುಶೀಲಳ ಸಹಾಯ ಹಸ್ತ ಬೇಕೇ ಬೇಕು. ಅವಳೂ ಬಂದಳೆಂದರೆ ಮಕ್ಕಳ ತಿಂಡಿ ಉಪಾಹಾರದಿಂದ ಹಿಡಿದು ಮಕ್ಕಳ ವಿದ್ಯಾಭ್ಯಾಸ ಹಾಗೂ ಸಿಟ್ಟು ಸೆಡವುಗಳನ್ನು ಸುಧಾರಿಸುವಂತಹ ಧೀಶಕ್ತಿ ಅವಳಲ್ಲಿತ್ತು. ಹಾಗೆಂದು ಅವಳಿಗೇನು ಕಷ್ಟ ಕೋಟಲೆಗಳಿಲ್ಲ. ಅವಳಿಗೂ ನಮ್ಮಲ್ಲಿ ಒಂದು ರೀತಿಯ ಮನಸ್ಸಮಾಧಾನ ಸಿಗುತ್ತಿತ್ತು. ನಮಗೂ ಅವಳು ನಮ್ಮ ಮನೆಯವಳೇ ಎನಿಸುತ್ತಿತ್ತು. ಅವಳಿಗೂ ನನ್ನವಳ ಗೆಳೆತನಕೋ ಸಮಯದ ಸದುಪಯೋಗಕ್ಕೋ ಬಂದು ಅಂತೂ ಎಲ್ಲರಲ್ಲೂ ಚೈತನ್ಯ ತುಂಬುತ್ತಿದ್ದಳು.

ಸುಶೀಲಳದು ಅದರ್ಶ ಕುಟುಂಬ. ಮನೆಗೆ ಬಂದು ಹೋಗುವವವರು ಎಂದೂ ತಪ್ಪುವುದಿಲ್ಲ. ಇವಳೂ ಎಲ್ಲರನ್ನೂ ಸುಧಾರಿಸಿಕೊಂಡು ಸಂಸಾರವನ್ನು ಸುಗಮವಾಗಿ ನಿಭಾಯಿಸುತ್ತಿದ್ದಳು. ಅವಳ ಪತಿಯೂ ಸಂಭಾವತನೇ. ಆದರೆ ಹೆಂಡತಿ ಮಕ್ಕಳ ಕತೆ ಹೆಚ್ಚಿನ ಪ್ರಾಧಾನ್ಯತೆ ಇಲ್ಲ. ದುಡಿದು ತಂದು ಹಾಕುವುದಕ್ಕೆ ಗೊತ್ತು. ಸಪ್ರತಿಷ್ಠೆ  ಮಾತ್ರ ಹೇಳಿತೀರದು. ಇವಳು ತನ್ನ ಕರ್ತವ್ಯವೆಂಬಂತೆ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗುತ್ತಿದ್ದಳು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಅವರವರ ಕಾರ್ಯಕ್ಷೇತ್ರಗಳಲ್ಲಿ ಸಫಲವಾಗಿರುವುದನ್ನು ನೋದಿ ಸಂತಸ ಪಡುವವಳೂ ಅವಳೇ. ಅದಾರು ಅವಳಿಗೆ ಸುಶೀಲೆ ಎಂದು ಹೆಸರಿಟ್ಟರೋ ಎಲ್ಲರಿಗೂ ಬೇಕಾದವಳಾಗಿ ಎಲ್ಲರ ಕಷ್ಟಗಳಿಗೂ ಭಾಗಿಯಾಗಿ ನಗುನಗುತ್ತಾ ಸಂಸಾರ ನೌಕೆ ಸಾಗಿಸುವ ಚೈತನ್ಯ ಅವಳಲ್ಲಿದೆ. ಅವಳ ಮನಕೆ ಶಾಂತಿ ಇಲ್ಲ ಮನಸಮಾಧಾನಕ್ಕಾಗಿ ನಮ್ಮಲಿಗೆ ಬರುವಳೆನೋ ಎಂದು ನನಗನ್ನಿಸುತ್ತದೆ. ಪತಿಯಾದವನು ಎಂದೆಂದೂ ಅವಳನ್ನು ಸಹಧರ್ಮಿಣಿ ಎಂಬ ಅಭಿಮಾನದಿಂದ ಕಾಣಲಿಲ್ಲ. ದೇಹದಲ್ಲಿ ಕಸುವು ಇರುವ ತನಕ ಇದು ಅನ್ನ ಸಂಸಾರ ಎನ್ನುವ ಜವಾಬ್ದಾರಿಯನ್ನು ಅರಿತು ಎಲ್ಲವನ್ನೂ ನಿಭಾಯಿಸಿದ ಅವಳಿಗೆ ಈ ಇಳಿವಯಸ್ಸಿನಲ್ಲಿ ಜೀವನವೆನ್ನುವುದು ಇಷ್ಟೇಯೇ? ಒಂದು ಒಳ್ಳೆಯ ಮಾತೂ ಆಡದ ಪತಿಯೊಡನೆ ನಾನು ಇಷ್ಟು ವರ್ಷ ಸಂಸಾರ ನಿರ್ವಹಿಸಿದ್ದೇನೆ ಎಂಬ ಅವಳ ಮನಸ್ಸಿನ ವೇದನೆ ನನ್ನವಳೊಡನೆ ಹೇಳಿಕೊಳ್ಳುತ್ತಾಳೆ. ಆದರೆ ಎಂದೂ ಯಾರಿಗೂ ಅವಳ ಚಿಂತೆಯನ್ನು ತೋರಿಸಿಕೊಂಡವಳಲ್ಲ.

ಲಿಂಗ ಮತ್ತು ಸುಶೀಲ ಇಬ್ಬರ ಕಥೆಗಳೂ ವಿರುದ್ಧ ದಿಶೆಯಲ್ಲಿ ಹೋದರೂ ಬೆಟ್ಟು ಮಾತ್ರ ಇಂದಿನ ಸಮಾಜದ ಕಡೆಗಿದೆ ಎಂದು ನನಗನ್ನಿಸುತ್ತದೆ. ದಿನ ದಿನಕ್ಕೂ ಸಮಾಜ ಎತ್ತ ಸಾಗುತ್ತಿದೆ. ಈ ಸಮಾಜದಲ್ಲಿಯೇ ನಾನು ನನ್ನಂತಹವರು ಅನೇಕರು ಇಲ್ಲವೇ? ಇದು ನನ ಕಣ್ಣೆದುರಿನ ದೃಷ್ಯ. ಇವುಗಳಿಗಿಂತ ಎಂತೆಂತಹ ಕಷ್ಟಗಳನ್ನು ಎದುರಿಸುವ್ವರು ಇರುವರು. ಆದರೆ ನನ್ನ ಮನಕ್ಕೆ ಒಂದು ಯಕ್ಷಪ್ರಶ್ನೆ. ಏಕೆ ಜನರು ಸ್ವಾರ್ಥಿಗಳಾಗುತ್ತಿದ್ದಾರೆ? ಅನ್ಯಾಯ ಅನಾಚಾರಗಳ ದಾಸರಾಗುತ್ತಿದ್ದಾರೆ. ನಮ್ಮ ಹಿರಿಯರು ಎಂತೆಂತಹ ಸುಂದರ ಸುಲಲಿತ ಮಾರ್ಗದರ್ಶನ ಮಾಡಿಸಿರುವರು.

ಪರಮಹಂಸರೂ, ವಿವೇಕಾನಂದರೂ, ಹಿಂದಿನ ದಾಸವರೇಣ್ಯರು ಇದಿನ ಪೂಜ್ಯ ಸಾಧು ಸಂತರು, ಇವರ ಮಾರ್ಗದರ್ಶನವನ್ನು ಕಿಂಚಿತ್ತಾದರೂ ಪರಿಪಾಲಿಸಬಹುದಲ್ಲವೇ? ಇದ್ದುದರಲ್ಲಿಯೇ ಶಾಂತ ಸಮಾಧಾನದಿಂದಿದ್ದರೆ ಕೆಟ್ಟ ಯೋಚನೆಗಳು ಬರಲು ಸಾಧ್ಯವೇ? ಅಬ್ಬಾ! ಇದು ಮುಗಿಯದ ಕಥೆ. ನಾವೇ ಬೇರೆಯವರಿಎ ಏನೂ ಹೇಳದೆ ಆದಷ್ಟು ಸದಾಚಾರಿಗಳಾಗಲು ಪ್ರಯತ್ನಿಸುವುದು ಉತ್ತಮ. ಮುಂದಿನ ಪೀಳಿಗೆಯಾದರೂ ಸದಾಚಾರ ಸಂಪನ್ನರಾಗಬಹುದೆಂಬ ಆಶೆ. ನಾನು ಅನುಭವಿಸಿದ ಕಥೆಗಳಿಗಿಂತ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಎದುರಿಸುವವರು ಬಹಳಷ್ಟು ಜನರಿರುವರು. ಇನ್ನೊಂದೆಡೆ ಮೋಸ, ಅನ್ಯಾಯ, ಅನಾಆರ, ಸುಲಿಗೆ ಮುಂತಾದವುಗಳ ದಾಸರೂ ಬಹಳಷ್ಟೂ ಜನ ನಮ್ಮ ಕಣ್ಣ ಮುಂದಿರುವರು. ಇಂತಹವರನ್ನು ನೋಡಿ ನಾವೇ ಕಣ್ಣು ಮುಚ್ಚುವಂತಾಗಿದೆ.

ಇತ್ತೀಚೆಗೆ ಸಂಭಾವಿತರಂತೆ ತೋರಿಸುವ ಜನರನ್ನೇ ನಂಬದಂತಾಗಿದೆ. ಅಂತೆಯೇ ಸುಭಗರಂತೆ ಇದ್ದು ನಮ್ಮನ್ನು ದೋಚುವವರೂ, ಅಂತೆಯೇ ಯಾರನ್ನೂ ನಂಬುವುದು ಕಷ್ಟ ಸಾಧ್ಯವಾಗಿದೆ. ಕಲಿಯುಗದ ದಾನವನಾಗಿ ಬದುಕಬೇಕೆ? ಬೇಕಾದಷ್ಟು ಸತ್ಸಂಗಗಳಿವೆ. ಕೆಲವರು ಸ್ವಪ್ರತಿಷ್ಠೆಗೆ ಅಲ್ಲಿಗೆ ಹೋಗುವರು. ಅದರೆ ಸುವಿಚಾರಗಳನ್ನು ಅಲ್ಲಿಂದಲೇ ಬಿಟ್ಟು ಬರುವರು. ಪುನಃ ತಮ್ಮ ಜೀವನವನ್ನು ಮೋಜಿನಲ್ಲೇ ಕಳೆಯುವವರು. ಅಂತೂ ಅವರವರು ಸುಧಾರಿಸಿದಾಗಲೇ ಸುಕೃತ ದಿನದ ಜನನ ಎಂದು ನವು ಪರಿಗಣಿಸುವುದು ಸಮಂಜಸವೆನಿಸುವುದೇ?

# ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ

## ಕಲಾ ಭಾಗ್ವತ್ ಅವರ ಕೃತಿ ಬಿಡುಗಡೆ ಕಾರ್ಯಕ್ರಮ

# ನಗರ ಜಾನಪದದ ಸೊಬಗು ಮುಂಬಾಪುರಿ ಕೃತಿಯಲ್ಲಿದೆ – ಡಾ. ಜಿ. ಎನ್.ಉಪಾಧ್ಯ

ಮುಂಬಯಿ ವಿಶ್ವವಿದ್ಯಾಲಯದಲ್ಲಿ ನೂರಾರು ವಿಭಾಗಗಳಿವೆ. ನಮ್ಮ ಕನ್ನಡ ವಿಭಾಗ ಪುಟ್ಟ ಗೂಡಾದರೂ ಅತಿ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ ಕೀರ್ತಿ ವಿಭಾಗಕ್ಕೆ ಇದೆ. ಜ್ಞಾನಂ ವಿಜ್ಞಾನ ಸಹಿತಂ ಎಂಬ ಮಾತಿನಂತೆ ಕಲಾ ಭಾಗ್ವತ್ ಅವರು ವಿಜ್ಞಾನ ಕ್ಷೇತ್ರದಿಂದ ಬಂದು ಸಾಹಿತ್ಯದ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅವರು ಸರ್ವ ಕುತೂಹಲಿ. ಜಾನಪದ ನಮ್ಮ ಜೀವನಾಡಿ. ಇಂದು ಬಿಡುಗಡೆಗೊಂಡ ಕಲಾ ಭಾಗ್ವತ್ ಅವರ 'ಮುಂಬಾಪುರಿ' ಕೃತಿಯಲ್ಲಿ ನಗರ ಜಾನಪದವನ್ನು ಸೃಷ್ಟಿ ಮಾಡಿದ್ದಾರೆ. ಆಕರ್ಷಕ ಶೀರ್ಷಿಕೆಯೊಂದಿಗೆ ಕಲಾ ಭಾಗ್ವತ್ ಅವರು ಈ ಕೃತಿಯ ಮೂಲಕ ಮುಂಬಯಿಯ ದರ್ಶನವನ್ನು ಮಾಡಿಸುತ್ತಾರೆ. ಕನ್ನಡಕ್ಕೆ ಒಂದು ಮೌಲಿಕವಾದ ಕೃತಿಯು ಸೇರ್ಪಡೆಯಾಗಿದೆ. ಒಳ್ಳೆಯ ಕವಿ ಮಾತ್ರ ಇಂಥಹ ಗದ್ಯ ರಚನೆ ಮಾಡಬಲ್ಲ. ಈ ಕೃತಿಯ ಲೇಖಕಿ ಕಲಾ ಭಾಗ್ವತ್ ಅವರು ಸ್ವತಃ ಒಬ್ಬ ಒಳ್ಳೆಯ ಕವಿಯಾಗಿರುವುದರಿಂದ ಸುಂದರವಾದ ಕೃತಿ ರೂಪುಗೊಂಡಿದೆ ಎಂದು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ನುಡಿದರು. ಅವರು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಅಕ್ಟೋಬರ್ 4ರಂದು ಕವಿ ಕುಸುಮಾಗ್ರಜ ಸಭಾಂಗಣದಲ್ಲಿ ಆಯೋಜಿಸಿದ್ದ ಕುಸುಮೋತ್ಸವ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತ ನಾಡಿದರು.





ಮುಂಬಯಿ ವಿಶ್ವ ವಿದ್ಯಾಲಯದ ಕನ್ನಡ ವಿಭಾಗದಲ್ಲಿ

ಇವತ್ತು ನನಗೆ ಸಾಹಿತ್ಯದ ಒಡನಾಟದಲ್ಲಿ ಮಿಂದೇಳುವ ಭಾಗ್ಯ ದೊರಕಿತು. ಇಂದು ಒಂದು ಒಳ್ಳೆಯ ಪುಸ್ತಕವನ್ನು ಲೋಕಾರ್ಪಣೆಗೊಳಿಸುವ ಅವಕಾಶ ನನ್ನ ಪಾಲಿಗೆ ಒದಗಿದೆ ಬಂದಿದೆ. ನಾನು ವಾಣಿಜ್ಯದ ವಿದ್ಯಾರ್ಥಿ. ಇಲ್ಲಿ ಸಾಹಿತ್ಯದ ಸಾಂಗತ್ಯ ದೊರಕಿದ್ದು ಸಂತೋಷವಾಗಿದೆ. ಕನ್ನಡ ವಿಭಾಗದ ನಡೆಸುವ ಸಾಹಿತ್ಯದ ಕೆಲಸ ಬೆರಗು ಮೂಡಿಸುವಂತದ್ದು. ಈ ಸಂಸ್ಥೆಯ ಜೊತೆ ಸೇರಿ ಕಾರ್ಯಕ್ರಮ ನಡೆಸುವ ಹಂಬಲವೂ ನನಗಿದೆ ಎಂದು ಕೃತಿ ಬಿಡುಗಡೆ ಗೊಳಿಸಿ ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನ ಪ್ರಾಂಶುಪಾಲರಾದ ಡಾ.ಮಂಜುನಾಥ್ ಕೋಟ್ಯಾನ್ ಅವರು ನುಡಿದರು.

ಕೃತಿಕಾರರಾದ ಕಲಾ ಭಾಗ್ವತ್ ಅವರು ಮಾತನಾಡುತ್ತಾ ನಾನು ಕಂಡದ್ದನ್ನು ಕಡೆದು ಮಥಿಸಿ ಬರೆದು ಪತ್ರಿಕೆಗೆ ಕಳುಹಿಸುವಾಗ ನಿರಾಳವೆನಿಸುತ್ತಿತ್ತು. ಈ ಬರಹದಲ್ಲಿ ತೊಡಗಿಸಿಕೊಂಡಾಗ ಮುಂಬಯಿಯ ಮೌನ, ಸಂತೋಷ, ಸಂಕಟ, ಕೇಕೆ ಕುಣಿತಗಳು ನನ್ನೆದುರು ಬಂದು ನಿಂತಿವೆ. ಕ್ಷೇತ್ರ ಕಾರ್ಯ ಮಾಡುವಾಗ ಆದ ಅನುಭವವನ್ನು ವರ್ಣಿಸಲು ಸಾಧ್ಯವಿಲ್ಲ. ವಿಶ್ವವಾಣಿಗೆ, ವಿರಾಮ ಪುರವಣಿಯ ಸಂಪಾದಕರಾದ ಶಶಿಧರ ಹಾಲಾಡಿ ಅವರು, ಬುದ್ಧಿ–ಭಾವವನ್ನು ಹದವಾಗಿ ಬಳಸುವ ರೀತಿಯನ್ನು ಕೌಶಲವನ್ನು ಹೇಳಿಕೊಟ್ಟ ಡಾ.ಜಿ.ಎನ್.ಉಪಾಧ್ಯ ಅವರಂತಹ ಗುರುಗಳನ್ನು ಪಡೆದ ನಾವು ಭಾಗ್ಯವಂತರು. ಈ ಕೃತಿ ರಚನೆಯ ಹಿಂದೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಕೃತಿಯ ಕುರಿತು ಮಾತನಾಡಿದ ಕನ್ನಡ ವಿಭಾಗದ ಸಂಶೋಧನ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ಕಲಾ ಅವರು ಮುಂಬಯಿಯ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ವರೂಪಗಳನ್ನು ಸಾವಯವಾಗಿ, ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಮುಂಬಯಿಯ ಪ್ರತಿಭಾವಂತ, ಅಪೂರ್ವ ಸಹೋದರರಾದ ಮೋಹನ ಮಾರ್ನಾಡ್, ವಾಸು ಮಾರ್ನಾಡ್ ಹಾಗೂ ಸುರೇಂದ್ರಕುಮಾರ್ ಮಾರ್ನಾಡ್ ಇವರ ಕಲಾಸೇವೆಯನ್ನು ಗುರುತಿಸಿ ವಿಶೇಷವಾಗಿ ಸತ್ಕರಿಸಲಾಯಿತು. ಕುಸುಮೋತ್ಸವದ ಉತ್ಸವ ಮೂರ್ತಿ ಕುಸುಮೋದರ ಶೆಟ್ಟಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.


## MATRIMONIAL

Alliance invited for a Smartha Kannada Brahmin Boy from a professionally qualified well employed
Name of the Groom: Aakash Vinod Rao
Date of Birth: 27/01/1996, 7.05pm, Vadodara Gujarat
Gotra: Bharadwaja Rashi: Mesha Nakshatra: Bharani, 1st Pada
Educational Qualification: L L B (Advocate) Company Secretary, Master of Commerce
Job Details: Corporate Lawyer Senior Associate Law Firm) Mumbai
Place of Working : Mumbai
Marital Status: Never Married, Unmarried
Package / Annual: per industry standards for Senior Associates, can be disclosed at personal meeting.
Father's Name and Occupation: Vinod Hanumant Rao, Retired Teacher
Mother's Name and Occupation: Mamta Vinod Rao, Administrative Officer LIC of India, Mumbai
Caste & Sub Caste: Brahmin, Smartha, Seernadu
No. of Brothers and Sisters: No Siblings
Expectations: Qualified & Employed
Native Place: Bengaluru
Parents Present Address: Mumbai
Contact No. Mr. Vinod Rao - 9920792562


## ಹೆಜ್ಜೆಗಳು

ಹುಟ್ಟಿದ್ದು ಚಿಕ್ಕೂರು ಓಬವ್ವನೂರು ಆದರೆ ಬೆಳೆದಿದ್ದು ಬೆಂಗಳೂರು
ಸೇರಿದ್ದು ಬಹಳ ದೊಡ್ಡೂರು ಆದ್ರೆನು...ಅಲ್ಲಿಯ ಮಂದಿ ನಮ್ಮೋರು
ಅದೃಷ್ಟವೆಂಬಂತೆ ಸಿಕ್ಕಿದರು ಕನ್ನಡಿಗರು,
ಅವರೇ ನಮ್ಮ ಕುಸುಮ–ಲಕ್ಷ್ಮಣಾಚಾರ್ಯ
ಹೆಜ್ಜೆ ಹೆಜ್ಜೆಗು ನನಗೆ ಮಾರ್ಗದರ್ಶನವಿತ್ತು, ಹಬ್ಬ ಹರಿದಿನದಿ ಸಲಹೆಗಳನಿತ್ತು
ಊರಿನ ತಾಯಿ–ತಂದೆಯರ ಜಾಗವಾ ತುಂಬಿದರು.
ದೊಡ್ಡೂರ ಜೀವನ ಶುರುವಿಗೆ ಸಮಸ್ಯೆ, ಆದರೆ ಆದೆ ನಾ ಆ ಸಂಘಕ್ಕೆ ಸದಸ್ಯೆ
ಅಂತಿಂಥ ಸಾಮಾನ್ಯವಲ್ಲ ಈ ಸಂಘ,
ಕನ್ನಡವರೇ ಕಟ್ಟಿದ ಮೈಸೂರು ಸಂಘ
ಚಿನ್ನದಾ ಹಬ್ಬ ನಾನಿಲ್ಲಿಗೆ ಬಂದಾಗ,
ಕಳೆದಾಯ್ತು ಆಗಲೇ ಇನ್ ಐವತ್ತು ವರ್ಷ
ಜೀವನದಿ ಬಂದಾಗ ಹಲವು ಸಂಕಷ್ಟಗಳು ದಾಟುವುದೆ
ದುರ್ಲಭ ಅಂತನಿಸುವಾ ಕ್ಷಣಗಳು
ಮಂಜಿನಂತೇ ಕರಗಿಸಿದ ನನಾಪ್ತ ಬಾಂಧವರು,
ಮತ್ಯಾರು ಅಲ್ಲ ಅವರೇ ಮಂಜುನಾಥ,ಅಯ್ಯನವರು
ನನ್ನ ಜೀವನದ ಮುಖ್ಯ ಪಾತ್ರಧಾರಿಗಳಿವರು, ಪ್ರತೀಕ್ಷಣ ಸ್ಮರಿಸುವೆ
ಕ್ಷೇಮದಿಂದಿರಲವರು
ಐವತ್ತರಲಿ ನಾ ಬಂದೆ, ನೂರರಲಿ ಮಗಳು ಮುಂದೆ, ಜೊತೆ
ಜೊತೆಯಲಿ ಸಾಗುವೆವು ಇನ್ನೂ ಮುಂದೆ ಮುಂದೆ
ಶತಕದಾ ಹೊಸ್ತಿಲಲಿ ನಿಂತುರುವ ನಾವೆಲ್ಲ
ಕಾತುರದಿ ಕಾದಿಹೆವು ದಾಟಲು ಎಲ್ಲಾ
ಹೇಗೆ ಕಳೆಯಿತೋ ಈ ನೂರು ವರ್ಷ ಗೊತ್ತಿಲ್ಲ ಅದಕೆ ಉತ್ತರವ
ದೇವರೇ ಬಲ್ಲ.

– ರಾಜೇಶ್ವರಿ ಗೋಪಾಲಕೃಷ್ಣ

## ...ದೇಸಿ ಪ್ರತಿಭೆ – ಬಿ. ವಿ. ಕಾರಂತ್

2010 ರಲ್ಲಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ವಾರ್ಷಿಕ ನಾಟಕ ಉತ್ಸವವಾದ 12ನೇ ಭಾರತ್ ರಂಗ ಮಹೋತ್ಸವದಲಿ, ಬಿ.ವಿ. ಕಾರಂತ್ ಮತ್ತು ಹಬೀಬ್ ತನ್ವೀರ್ ಅವರ ಜೀವನ, ಕೃತಿಗಳು ಮತ್ತು ರಂಗ ಭೂಮಿಗೆ ಮೀಸಲಾದ ಗೌರವ ಪ್ರದರ್ಶನವನ್ನು ಪ್ರದರ್ಶಿಸಲಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಿರ್ಮಲ್ ವರ್ಮಾ ಒಮ್ಮೆ ಕಾರಂತ್ ಅವರನ್ನು "ಭಾರತೀಯ ರಂಗಭೂಮಿಯ ನಿಜವಾದ ದೇಸಿ ಪ್ರತಿಭೆ" ಎಂದು ಬಣ್ಣಿಸಿದ್ದರು.

ಕಾರಂತರು ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದರು, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಕನ್ನಡದಲ್ಲಿ ಹಿಂದಿಯ ಹತ್ತಿರವಿದೆ. ಅವರು ಇಂಗ್ಲಿಷ್, ತೆಲುಗು, ಮಲಯಾಳಂ, ತಮಿಳು, ಪಂಜಾಬಿ, ಉರ್ದು, ಸಂಸ್ಕೃತ ಮತ್ತು ಗುಜರಾತಿ ಭಾಷೆಗಳಲ್ಲಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಹಯವದನ (ಗಿರೀಶ್ ಕಾರ್ನಾಡರಿಂದ), ಕತ್ತಲೆ ಬೆಳಕು, ಹುಚ್ಚು ಕುದುರೆ, ಏವಂ ಇಂದ್ರಜಿತ್, ಈಡಿಪಸ್, ಸಂಕ್ರಾಂತಿ, ಜೋಕುಮಾರ ಸ್ವಾಮಿ, ಸತ್ತವರ ನೇರಳು, ಹುಟ್ಟುವ ಬಡಿದರೆ ಮತ್ತು ಗೋಕುಲ ನಿರ್ಗಮನ ಇವು ಕನ್ನಡದಲ್ಲಿ ಅವರ ಕೆಲವು ಜನಪ್ರಿಯ ನಾಟಕಗಳು. ಅವರು ಹಿಂದಿಯಲ್ಲಿ ನಿರ್ದೇಶಿಸಿದ ನಲವತ್ತು ಅಥವಾ ಅದಕ್ಕಿಂತ ಹೆಚ್ಚು ನಾಟಕಗಳಲ್ಲಿ, ಮ್ಯಾಕ್‌ಬೆತ್ (ಸಾಂಪ್ರದಾಯಿಕ ಯಕ್ಷಗಾನ ನೃತ್ಯ ರೂಪವನ್ನು ಬಳಸಿ), ಕಿಂಗ್ ಲಿಯರ್, ಚಂದ್ರಹಾಸ, ಘಾಸಿರಾಮ್ ಕೊತ್ವಾಲ್, ಮೃಚ್ಛ್‌ ಕಟಿಕ, ಮುದ್ರಾ ರಾಕ್ಷಸ ಮತ್ತು ಮಾಳವಿಕಾಗ್ನಿ ಮಿತ್ರ ಕೆಲವು ಹೆಚ್ಚು ಜನಪ್ರಿಯವಾಗಿವೆ. ಕಾರಂತ್ ಮಕ್ಕಳ ನಿರ್ದೇಶನದಲ್ಲಿಯೂ ಅಪಾರ ಆಸಕ್ತಿ ಹೊಂದಿದ್ದು, ಪಂಜರ ಶಾಲೆ, ನೀಲಿ ಕುದುರೆ, ಹೆಡ್ಡಾಯನ, ಅಳಿಲು ರಾಮಾಯಣ ಮತ್ತು ದಿ ಗ್ರೇಟ್‌ಫುಲ್ ಮ್ಯಾನ್‌ನಂತಹ ಹಲವಾರು ಮಕ್ಕಳ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕಾರಂತ್ 26 ಚಿತ್ರಗಳಿಗೆ ಸಂಗೀತ ಸಂಯೋಜಿಸುವುದರ ಜೊತೆಗೆ ನಾಲ್ಕು ಚಲನಚಿತ್ರಗಳು ಮತ್ತು ನಾಲ್ಕು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದರು. ಅವರು ಗಿರೀಶ್ ಕಾರ್ನಾಡ್ ಅವರೊಂದಿಗೆ ವಂಶ ವೃಕ್ಷ ಮತ್ತು ತಬ್ಬಲಿಯು ನೀನಾದೆ ಮಗನೆ ಮುಂತಾದ ಚಿತ್ರಗಳನ್ನು ಸಹ–ನಿರ್ದೇಶಿಸಿದರು.

ಭಾರತೀಯ ರಂಗಭೂಮಿಯನ್ನು ಮರು ವ್ಯಾಖ್ಯಾನ ಮಾಡಿದವರು ಬಿ. ವಿ. ಕಾರಂತ್ ಅವರು, ರಂಗಭೂಮಿಯ ದಂತಕಥೆಯಾದ ಬಿ.ವಿ. ಕಾರಂತ್ ಅವರು ಅಕ್ಟೋಬರ್ 29, 2007ರಲ್ಲಿ ನಿಧನರಾದರು.

## ....ಬಿ. ವಿ. ಕಾರಂತರ ಸಂಸ್ಮರಣೆ



ಕವಿ ಪು.ತಿ.ನ. ಅವರ ಗೋಕುಲ ನಿರ್ಗಮನ ನಾಟಕ, ಕವಿ ಮನಸಿನ, ಕನಸಿನ ಲೋಕ. ಆ ಕನಸಿನ ವಿಚಿತ್ರ ಲೋಕದಲ್ಲಿ ವಿಹರಿಸಿ, ಪಾತ್ರಗಳ ಮೂಲಕ ಪ್ರೇಕ್ಷಕರನ್ನೂ ಆ ಕನಸಿನ ಲೋಕಕ್ಕೆ ಸೆಳೆದೊಯ್ಯುವ ಶಕ್ತಿ ಗೋಕುಲ ನಿರ್ಗಮನಕ್ಕೆ ಇದೆ. ಪುತಿನ ಅಕ್ಷರ ಅಕ್ಷರದಲ್ಲೂ, ಪದ ಪದದಲ್ಲೂ ಪ್ರಾಸ, ಮಟ್ಟು, ತಾಳ, ರಾಗ, ಭಾವ, ಮಾಧುರ್ಯ ತುಂಬಿದ, ಸಾಲು ಸಾಲುಗಳಲ್ಲಿ ಅರ್ಥಗಳ ಪೊಟ್ಟಣಗಳನ್ನು ಕಟ್ಟಿಕೊಟ್ಟಿರುವ ಈ ನಾಟಕ, ನಾಟಕ ಜಗತ್ತಿನ ಮೇರು ಕೃತಿ. ಈ ಶ್ರೇಷ್ಠ ಸಾಹಿತ್ಯ ಕೃತಿಗೆ ಬಿ.ವಿ. ಕಾರಂತರು ಉತ್ತಮ ಸಂಗೀತ ನೀಡಿ. ನಿರ್ದೇಶಿಸಿ ಗೋಕುಲ ನಿರ್ಗಮನ ನಾಟಕವನ್ನು ಅದ್ವಿತೀಯ ರಂಗ ಪ್ರಯೋಗವನ್ನಾಗಿಸಿದ್ದಾರೆ.



ಈ ಕೃತಿಯನ್ನು ಪುನಶ್ಚೇತನಗೊಳಿಸಿರುವುದು ಬೆನಕದ ಹೆಮ್ಮೆ. ಈ ನಾಟಕ ಬೆಂಗಳೂರು, ಮುಂಬೈ, ಚೆನ್ನೈ, ಕೊಲ್ಕತ್ತ ನಗರಗಳಲ್ಲಿ ಪ್ರದರ್ಶನಗಳನ್ನು ಕಂಡಿದೆ. ನವೆಂಬರ್ 2, 2025ರಂದು ಮುಂಬೈಯ ಮೈಸೂರು ಅಸೋಸಿಯೇಷನ್‌ನಲ್ಲಿ ಸಂಜೆ 6.30ಕ್ಕೆ ಪ್ರದರ್ಶನಗೊಂಡಿತು.

ಮೈಸೂರು ಅಸೋಸಿಯೇಷನ್, ಮುಂಬಯಿ
The Mysore Association, Bombay
393, Bhau Daji Road, Matunga, Mumbai - 400 019. Tel: 83697 88157 (022) 2403 7065
Website: www.mysoreassociation.in E-mail: mysoreassociation.mumbai@gmail.com

## Mysore Association's Centenary Year (1926 - 2026)

# We are pleased to announce a Drawing Competition

**Date of Competition :** Sunday, 30th November 2025 Time: (From 9 AM to 11 AM)
**Location :** The Mysore Association premises at Matunga

***The details of the competition are as below***

1. The competition is open for individuals from Maharashtra and will be conducted at The Mysore Association premises at Matunga.
2. The competition will be held:
   a. Drawing / Painting for Children **(From 9 AM to 11 AM)**
3. Children's category will be in different groups as below
   **a. Group A (Children in class 1-2). Topics (any one)**
      i. My favourite God ii. My favourite cartoon character iii. My classroom
   **b. Group B (Children in class 3-4). Topics (any one)**
      i. Me and my friends ii. My favourite animal iii. Flower Pot
   **c. Group C (Children in class 5-6). Topics (any one)**
      i. Any story from Krishnavatara ii. My favourite tourist place in Maharashtra
      iii. My favourite character from Ramayana
   **d. Group D (Children in class 7-8). Topics (any one)**
      i. Unity in creativity ii. My favourite Temple iii. My favourite sports character
   **e. Group E (Children in class 9-10). Topics (any one)**
      i. Operation Sindoor ii. Indian Astronaut in International Space Station
      iii. My school in rainy season
4. **Prizes:**
   a. For Group A to E, three prizes (I, II, III) in each group in the form of drawing kits
   b. Prizes will be distributed in the afternoon on the same day.
5. Drawing paper will be provided by the Organisers at the time of competition. All other drawing materials shall be brought by the participants.
6. Light refreshments will be provided after the competition.
7. The decision of the judges is final.
8. The drawings / paintings submitted as a part of the competition will become the property of The Mysore Association.

10. ***For clarifications, please contact:***
   **a. The Mysore Association : 83697 88157 / 022 2403 7065**
   **b. Sri. Narayana Navilekar : 92233 81466**
   **c. Sri. Jay Salian : 93234 03080**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077